www.KannadaPrabha.in ಬುಧವಾರ 6.05.2026 • ಬೆಂಗಳೂರು • ಬೆಳಗಾವಿ • ಶಿವಮೊಗ್ಗ • ಹುಬ್ಬಳ್ಳಿ • ಮಂಗಳೂರು • ಕಲಬುರಗಿ Kannada Prabha • Daily • Wednesday • 06.05.2026 • Volume 60 • Issue 125 • Pages 10 • Price ₹7 Hubballi

ಕನ್ನಡಪ್ರಭ
ನೇರ.ದಿಟ್ಟ.ನಿರಂತರ



ಇಂದಿನ ಸ್ಪೆಷಲ್! ಪುಟದಲ್ಲಿಂದು

ಟಾಕ್ಸಿಕ್ ಚಿತ್ರದ ರೊಮ್ಯಾಂಟಿಕ್ ದೃಶ್ಯಕ್ಕೆ ಕಟ್ ಕೇಳಿಲ್ಲ: ಕಿಯಾರಾ

ಬಹುನಿರೀಕ್ಷಿತ 'ಟಾಕ್ಸಿಕ್' ಸಿನಿಮಾದಲ್ಲಿ ರಾಕಿಂಗ್ ಸ್ಟಾರ್ ಯಶ್ ಜೊತೆಗಿನ ರೊಮ್ಯಾಂಟಿಕ್ ಸೀನ್ ಎಡಿಟ್‌ಗೆ ನಾನು ಬೇಡಿಕೆ ಇಲ್ಲ. ಈ ಕುರಿತ ವದಂತಿ 'ಪಕ್ಕಾ ಅಸಂಬದ್ಧ'. ಚಿತ್ರದ ನಟಿ ಕಿಯಾರಾ ಅಡ್ವಾಣಿ ಸ್ಪಷ್ಟನೆ. 10



ಯುರೋಪ್ ಟು ಆಫ್ರಿಕಾ ಈಜಿ 60 ವರ್ಷದ ಮಿಲಿಂದ್ ಸಾಧನೆ! ↘ 7



ಪಿಐಎಲ್‌ಗಳು ಪ್ರಚಾರದ ಹಿತಾಸಕ್ತಿ ಅರ್ಜಿಗಳಾಗುತ್ತಿವೆ: ಸುಪ್ರೀಂ ಕಿಡಿ ↘ 7



ವಾಣಿಜ್ಯ ಎಲ್ಪಿಜಿ ದರ ಏರಿಕೆ ಖಂಡಿಸಿ ಕೇರಳ ಹೋಟೆಲ್ ಬಂದ್ ↘ 7



ಬಿಜೆಪಿ ಸೇರಿದ 6 ಆಪ್ ಸಂಸದರ ಅನರ್ಹತೆಗೆ ರಾಷ್ಟ್ರಪತಿಗೆ ಮನವಿ ↘ 6

ಬಂಗಾಳ ಗೆಲುವಿಗೆ ಮೋದಿಗೆ ಅಧ್ಯಕ್ಷ ಟ್ರಂಪ್ ಅಭಿನಂದನೆ


ವಾಷಿಂಗ್ಟನ್: ಬಂಗಾಳ ಸೇರಿ 3 ರಾಜ್ಯಗಳಲ್ಲಿ



ಬಿಜೆಪಿಯ ಚುನಾವಣಾ ಗೆಲುವಿಗಾಗಿ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅಭಿನಂದನೆ ಸಲ್ಲಿಸಿದ್ದಾರೆ ಎಂದು ಶ್ವೇತಭವನ ಮಾಹಿತಿ ನೀಡಿದೆ. ವಿವರ ↘ 7

ಶ್ರೀ ಶ್ರೀ ಕಾರ್ಯಕ್ರಮಕ್ಕೆ ಮೇ 10ಕ್ಕೆ ಮೋದಿ ಬೆಂಗ್ಳೂರಿಗೆ ಆಗಮನ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ



ಮೇ 10ರಂದು ಆರ್ಟ್ ಆಫ್ ಲಿವಿಂಗ್‌ನ 45ನೇ ವಾರ್ಷಿಕೋತ್ಸವ, ರವಿಶಂಕರ್‌ಗುರೂಜಿ 70ನೇ ಹುಟ್ಟುಹಬ್ಬದ ಅಂಗವಾಗಿ ನಡೆಯುವ ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಬೆಂಗಳೂರಿಗೆ ಆಗಮಿಸಲಿದ್ದಾರೆ. ವಿವರ ↘ 5

ಶೃಂಗೇರಿ ಮರು ಎಣಿಕೇಲಿ ವೋಟ್ ಡಕಾಯಿತಿ: ಸಿಎಂ

ಬೆಂಗಳೂರು: ಶೃಂಗೇರಿ ಕ್ಷೇತ್ರದ ಅಂಚೆ ಮತ ಮರು ಎಣಿಕೆ ವೇಳೆ ನಡೆದಿದ್ದು ವೋಟ್ ಚೋರಿ ಅಲ್ಲ, ವೋಟ್ ಡಕಾಯಿತಿ. ಬಿಜೆಪಿಯವರು ಅಂಚೆ ಮತ ಚೀಟಿ ತಿದ್ದಿ ರಾಜೇಗೌಡರ 255 ಮತ ಅಸಿಂಧುಗೊಳಿಸಿದ್ದಾರೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆರೋಪಿಸಿದ್ದಾರೆ. ವಿವರ ↘ 4

ಕಬ್ಬಿನ ಬೆಂಬಲ ಬೆಲೆ 365 ರು.ಗೆ ಏರಿಕೆ: ಸಂಪುಟ ನಿರ್ಧಾರ

ನವದೆಹಲಿ: ಕಬ್ಬು ಪೂರೈಸುವ ರೈತರಿಗೆ ಮಿಲ್‌ಗಳು ಪಾವತಿಸಬೇಕಾದ ಮೊತ್ತದಲ್ಲಿ 10 ರುಪಾಯಿ ಹೆಚ್ಚಳ ಮಾಡಲಾಗಿದ್ದು, ಕ್ವಿಂಟಾಲ್‌ಗೆ 365 ರುಪಾಯಿ ಆಗಲಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಕೇಂದ್ರ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಮಾಡಲಾಗಿದೆ. ವಿವರ ↘ 6

ಬಯೋಕಾನ್‌ಗೆ ಕ್ಲೇರ್ ಉತ್ತರಾಧಿಕಾರಿ: ಕಿರಣ್ ಮಜುಂದಾರ್

ನವದೆಹಲಿ: ಬೆಂಗಳೂರು ಮೂಲದ ಬಹುರಾಷ್ಟ್ರೀಯ ಬಯೋಟೆಕ್ ದಿಗ್ಗಜ ಕಂಪನಿ ಬಯೋಕಾನ್‌ನ ಸಂಸ್ಥಾಪಕಿ ಕಿರಣ್ ಮಜುಂದಾರ್ ಅವರು ತಮ್ಮ ಉತ್ತರಾಧಿಕಾರಿಯಾಗಿ ಸಂಬಂಧದಲ್ಲಿ ಸೊಸೆಯಾಗಿರುವ ಕ್ಲೇರ್ ಮಜುಂದಾರ್ (37) ಅವರ ಹೆಸರು ಘೋಷಿಸಿದ್ದಾರೆ. ವಿವರ ↘ 7

ಪುಟ ↘ 6

ಸುಪ್ರೀಂ ಜಡ್ಜ್‌ಗಳ ಸಂಖ್ಯೆ 38ಕ್ಕೇರಿಕೆ: ಕೇಂದ್ರ ಸಂಪುಟ

ಜೀವನಕ್ಕಾಗಿ 4 ಮನೆಗಳಲ್ಲಿ ಮುಸುರೆ ತಿಕ್ಕುತ್ತಿದ್ದ ಕಲಿತಾ ಈಗ ಬಿಜೆಪಿ ಶಾಸಕಿ!

ಬಂಗಾಳದ ಆಸ್ಗ್ರಾಮ್ ಕ್ಷೇತ್ರದಲ್ಲಿ ಜಯ | ಬಿಜೆಪಿ ಟಿಕೆಟ್‌ನಿಂದ ಗೆಲುವು

ಕೋಲ್ಕತಾ: ರಾಜಕೀಯ ಕೇವಲ ಹಣವಂತರಿಗೆ, ಪ್ರಭಾವಿಗಳಿಗೆ ಮಾತ್ರ ಎನ್ನುವ ಹೊತ್ತಿನಲ್ಲಿ ಜೀವನಕ್ಕಾಗಿ ಅವರಿವರ ಮನೆ ಪಾತ್ರೆ ತಿಕ್ಕುತ್ತಿದ್ದ ಬಡ ಮಹಿಳೆಯೊಬ್ಬರು ಪಶ್ಚಿಮ ಬಂಗಾಳ ವಿಧಾನಸಭೆಗೆ ಆಯ್ಕೆಯಾಗುವ ಮೂಲಕ ಎಲ್ಲರ ಅಚ್ಚರಿಗೆ ಕಾರಣವಾಗಿದ್ದಾರೆ.

ಕೆಲವೇ ವರ್ಷಗಳ ಹಿಂದಿನವರೆಗೂ 4 ಮನೆಗಳಲ್ಲಿ ಪಾತ್ರೆ ತಿಕ್ಕಿ ಮಾಸಿಕ ಕೇವಲ 2500 ರು. ಸಂಪಾದಿಸುತ್ತಿದ್ದ ಕಲಿತಾ ಮಾಝಿ ಇದೀಗ ಆಸ್ಗ್ರಾಮ್ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿ 107692 ಮತಗಳನ್ನು ಪಡೆಯುವ ಮೂಲಕ ಟಿಎಂಸಿಯ ಶ್ಯಾಮಪ್ರಸನ್ನ ಲೋಹರ್ ಅವರನ್ನು 12,535 ಮತಗಳ ಅಂತರದಿಂದ ಸೋಲಿಸಿದ್ದಾರೆ. ↘ 6



ಎಲ್ಲರ ಮನೆ ಕೆಲಸ ಮಾಡುತ್ತಿದ್ದ ನನಗೆ ಜನರ ಸಮಸ್ಯೆ ಅರಿವಿದೆ. ರಸ್ತೆ, ಕುಡಿಯುವ ನೀರು, ಮಹಿಳೆಯರಿಗೆ ಭದ್ರತೆ, ಯುವಕರಿಗೆ ಉದ್ಯೋಗ ನನ್ನ ಆದ್ಯತೆಯಾಗಿರಲಿದೆ.
• **ಕಲಿತಾ ಮಾಝಿ** ಬಿಜೆಪಿ ಶಾಸಕಿ

ಕರ್ನಾಟಕ ಪಿಯು ಪಠ್ಯದ ಭಾಗವಾದ ಬಾಬರ್ ಇದೀಗ ಪ.ಬಂಗಾಳ ಶಾಸಕ!

ಅನಾಥ ಮಕ್ಕಳ ಟೀಚರ್ ಖ್ಯಾತಿ | ಕರ್ನಾಟಕದಲ್ಲೂ ಸರಣಿ ಉಪನ್ಯಾಸ

• **ರಮೇಶ್ ಬಿದರಕೆರೆ**

ಕನ್ನಡಪ್ರಭ ವಾರ್ತೆ ಹಿರಿಯೂರು

ಕರ್ನಾಟಕದ ಪಿಯು ಪಠ್ಯದ ಭಾಗವಾಗಿರುವ ಪಶ್ಚಿಮ ಬಂಗಾಳದ ಮುರ್ಷಿದಾಬಾದ್ ಜಿಲ್ಲೆಯ ಭಾಪ್ಪ ಗ್ರಾಮದ ಶಿಕ್ಷಣ ತಜ್ಞ ಬಾಬರ್‌ಅಲಿ (34), ಈಗ ಪಶ್ಚಿಮ ಬಂಗಾಳ ವಿಧಾನಸಭೆ ಪ್ರವೇಶಿಸಿದ್ದಾರೆ. ಜಲಂಗಿ ವಿಧಾನ ಸಭಾ ಕ್ಷೇತ್ರದಲ್ಲಿ ಟಿಎಂಸಿಯಿಂದ ಸ್ಪರ್ಧಿಸಿ, ಗೆಲುವು ಸಾಧಿಸಿದ್ದಾರೆ.

ತಮ್ಮ 9ನೇ ವಯಸ್ಸಿನಲ್ಲಿಯೇ ಬೀದಿಗಳಲ್ಲಿ ಅಲೆಯುತ್ತಾ ಚಿಂದಿ ಆಯುವ ಮಕ್ಕಳು, ಅಲೆಮಾರಿ, ಅನಾಥ ಮಕ್ಕಳನ್ನು ಮನೆಯ ಹಿತ್ತಲಲ್ಲಿ ಕೂರಿಸಿಕೊಂಡು ಪಾಠ ಹೇಳಲು ಪ್ರಾರಂಭಿಸಿದ ಬಾಬರ್‌ಅಲಿ, ಇಂದು ಸುಮಾರು 2,000 ಮಕ್ಕಳು ಓದುವ ಶಾಲೆಯನ್ನು ನಡೆಸುತ್ತಿದ್ದಾರೆ. ↘ 6



- 2000ಕ್ಕೂ ಹೆಚ್ಚು ಅಲೆಮಾರಿ, ಅನಾಥ ಮಕ್ಕಳಿಗೆ ಶಿಕ್ಷಣ ನೀಡುತ್ತಿರುವ ಬಾಬರ್
- ಕರ್ನಾಟಕ ಸೇರಿ ಹಲವು ರಾಜ್ಯಗಳಲ್ಲಿ ಶಿಕ್ಷಣದ ಉಪನ್ಯಾಸದ ಮೂಲಕ ಖ್ಯಾತಿ
- ಸಾಧನೆ ಮೆಚ್ಚಿ 2013ರಲ್ಲಿ ಕರ್ನಾಟಕ ಪಿಯು ಪಠ್ಯದಲ್ಲಿ ಬಾಬರ್ ಪರಿಚಯ
- ಬಿಬಿಸಿಯಿಂದ ಬಾಬರ್ ಬಗ್ಗೆ 'ವಿಶ್ವದ ಅತಿ ಕಿರಿಯ ಮುಖ್ಯ ಶಿಕ್ಷಕ' ಸಾಕ್ಷ್ಯಚಿತ್ರ ಪ್ರಸಾರ

ನಾವು ಸೋತಿಲ್ಲ, ಸಿಎಂ ಸ್ಥಾನ ಬಿಡಲ್ಲ: ಮಮತಾ

ಬಿಜೆಪಿಯ ಗೆಲುವು ಜನಾದೇಶವಲ್ಲ, ದೊಡ್ಡ ಪಿತೂರಿ ರಾಜೀನಾಮೆ ನೀಡಲ್ಲ, ನನ್ನ ಹೋರಾಟ ನಿಲ್ಲುವುದಿಲ್ಲ ಸಂವಿಧಾನ ಪ್ರಕ್ರಿಯೆಗೇ ಬಂಗಾಳ ಸಿಎಂ ದೀದಿ ಸವಾಲ್

• ***ಪಿಟಿಐ*** ಕೋಲ್ಕತಾ

ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣಾ ಫಲಿತಾಂಶವು 'ಜನಾದೇಶವಲ್ಲ, ಬದಲಾಗಿ ಪಿತೂರಿ' ಎಂದು ಆರೋಪಿಸಿರುವ ಟಿಎಂಸಿ ಮುಖ್ಯಸ್ಥೆ ಹಾಗೂ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ, ತಾವು ಸಿಎಂ ಸ್ಥಾನದಿಂದ ಕೆಳಗಿಳಿಯುವ ಸಾಧ್ಯತೆಯನ್ನು ತಳ್ಳಿಹಾಕಿದ್ದಾರೆ. ಆದರೆ ಬೀದಿಗಿಳಿದು ವಿರೋಧ ಪಕ್ಷವಾದ ಇಂಡಿಯಾ ಕೂಟವನ್ನು ಬಲಪಡಿಸುವುದಾಗಿ ಪ್ರತಿಜ್ಞೆ ಮಾಡಿದ್ದಾರೆ. ಮಮತಾ ಅವರ ಈ ಹೇಳಿಕೆ ಕಂಡು ಕೇಳರಿಯದ ಹೇಳಿಕೆಯಾಗಿದೆ. ಏಕೆಂದರೆ ಚುನಾವಣೆಯಲ್ಲಿ ಪಕ್ಷ ಸೋತ ಬಳಿಕ ಸಿಎಂಗಳು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದು ವಾಡಿಕೆ. ↘ 6



ಮುಂದೇನು?

- 5 ವರ್ಷದ ಜನಾದೇಶ ಮುಗಿದ ಬಳಿಕ ಯಾವ ಸರ್ಕಾರಕ್ಕೂ ಮುಂದುವರಿವ ಅಧಿಕಾರವಿಲ್ಲ
- ಇದೇ ನಿಯಮ ಆಧರಿಸಿ 5 ವರ್ಷ ಅವಧಿ ಬಳಿಕ ಸಿಎಂ ರಾಜೀನಾಮೆ ನೀಡ್ಬೇಕು, ಇಲ್ಲದಿದ್ರೆ ವಜಾ
- ಹೊಸ ಸಿಎಂ ಪ್ರಮಾಣ ವಚನ ಸ್ವೀಕಾರದವರೆಗೂ ರಾಜ್ಯಪಾಲರಿಗೆ ಕಾಯುವ ಅವಕಾಶ ಇದೆ
- ಅಲ್ಲಿಯವರೆಗೂ ಸಿಎಂ ರಾಜೀನಾಮೆ ನೀಡದಿದ್ರೆ ರಾಜ್ಯಪಾಲರಿಗೆ ವಜಾದ ಅಧಿಕಾರ ಇದೆ
- ಚುನಾವಣೆ ಪ್ರಕ್ರಿಯೆಯನ್ನೇ ಪ್ರಶ್ನಿಸಿ ಮಮತಾ ಕೋರ್ಟಿಗೆ ಹೋಗುವ ಅಧಿಕಾರವಿದೆ.ಆದಾಗ್ಯೂ ರಾಜೀನಾಮೆ ಕೊಟ್ಟೇ ಹೋರಾಡಬೇಕು


ಮುಂದಿನ ವಾರ ಸಿಎಂ ಸಿದ್ದು, ಡಿಕೆಶಿಗೆ ದೆಹಲಿಗೆ ಬುಲಾವ್?

ಸದ್ಯ ಕೇರಳದಲ್ಲಿ ಹೈಕಮಾಂಡ್ ಬ್ಯುಸಿ | ಸರ್ಕಾರ ರಚನೆ ಬಳಿಕ ರಾಜ್ಯದತ್ತ ಚಿತ್ತ ಬಳಿಕ ಉಭಯ ನಾಯಕರ ಕರೆಸಿ ನಾಯಕತ್ವ, ಸಂಪುಟ ಪುನಾರಚನೆ ಚರ್ಚೆ?

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಕೇರಳದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರ ರಚನೆ ಪ್ರಕ್ರಿಯೆ ಪೂರ್ಣಗೊಂಡ ನಂತರ ಕಾಂಗ್ರೆಸ್ ಹೈಕಮಾಂಡ್ ರಾಜ್ಯ ರಾಜಕಾರಣದತ್ತ ಗಮನ ಹರಿಸುವ ಸಾಧ್ಯತೆಯಿದ್ದು, ನಂತರವಷ್ಟೇ ರಾಜ್ಯ ನಾಯಕತ್ವ ಹಾಗೂ ಸಚಿವ ಸಂಪುಟ ಪುನಾರಚನೆಯಂಥ ವಿಚಾರಗಳ ಬಗ್ಗೆ ಹೈಕಮಾಂಡ್ ಚರ್ಚೆ ಆರಂಭಿಸಬಹುದು ಎನ್ನಲಾಗುತ್ತಿದೆ.

ಮೂಲಗಳಪ್ರಕಾರಕಾಂಗ್ರೆಸ್ ಹೈಕಮಾಂಡ್ ಮೇ 10ರವರೆಗೂ ಕೇರಳ ಸಿಎಂ ಆಯ್ಕೆ ವಿಚಾರದಲ್ಲಿ ಸಂಪೂರ್ಣ ವ್ಯಸ್ತವಾಗಿರಲಿದೆ. ನಂತರ ಅಂದರೆ ಬಹುತೇಕ ಮೇ 13 ಅಥವಾ 14ರ ವೇಳೆಗೆ ರಾಜ್ಯ ರಾಜಕಾರಣದ ಬಗ್ಗೆ ಗಮನ ಹರಿಸಲು ಮನಸ್ಸು ಮಾಡಬಹುದು. ↘ 10



ಸಚಿವ ಸ್ಥಾನ ಆಕಾಂಕ್ಷಿಗಳ ದಿಲ್ಲಿ ಭೇಟಿ ತಪ್ಪಲ್ಲ. ಈ ಬಗ್ಗೆ ಅವರು ಮಾಹಿತಿ ನೀಡಿದ್ದರು. ಹೋಗುವುದು ನಿಮ್ಮಿಷ್ಟ ಎಂದಿದ್ದೆ. ಆದರೆ ನನಗೆ ದೆಹಲಿ ಕರೆ ಬಂದಿಲ್ಲ. ಬಂದರೆ ಹೋಗುವೆ.
• **ಸಿದ್ದರಾಮಯ್ಯ** ಮುಖ್ಯಮಂತ್ರಿ

ಸರ್ಕಾರಕ್ಕೆ 3 ವರ್ಷ ತುಂಬುವ ಮೊದಲೋ, ನಂತರವೋ?

- ನಾಯಕತ್ವ ಗೊಂದಲ, ಸಂಪುಟ ಪುನಾರಚನೆ ಬಗ್ಗೆ ರಾಜ್ಯ ಕಾಂಗ್ರೆಸ್‌ನಲ್ಲಿ ಗೊಂದಲ ಹಿನ್ನೆಲೆ
- ಈ ಸಮಸ್ಯೆ ಇತ್ಯರ್ಥ ಆಗದಿದ್ದರೆ ಮುಂದಿನ ಎಲೆಕ್ಷನ್‌ನಲ್ಲಿ ಪಕ್ಷಕ್ಕೆ ಹೊಡೆತ ಬೀಳುವ ಆತಂಕ
- ಹೀಗಾಗಿ ಈ ಬಗ್ಗೆ ಸಿಎಂ, ಡಿಸಿಎಂ ಇಬ್ಬರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ನಿರ್ಧಾರ ಸಾಧ್ಯತೆ
- ಪಕ್ಷದ ಒಂದು ಬಣದ ಪ್ರಕಾರ ಸರ್ಕಾರಕ್ಕೆ 3 ವರ್ಷ ತುಂಬುವ ಮೊದಲು ನಿರ್ಧಾರ ಪ್ರಕಟ?
- ಇನ್ನೊಂದು ಬಣದ ಪ್ರಕಾರ ಸರ್ಕಾರಕ್ಕೆ 3 ವರ್ಷ ತುಂಬುವ ಮೇ 20ರ ಬಳಿಕವಷ್ಟೇ ನಿರ್ಧಾರ

ಸರ್ಕಾರ ರಚನೆಗೆ ವಿಜಯ್ ಕಸರತ್ತು: ನಾಳೆ ಪ್ರಮಾಣ?

2 ವಾರದಲ್ಲಿ ವಿಶ್ವಾಸ: ಗೌರ್ನರ್‌ಗೆ ಪತ್ರ ಬಹುಮತದ 10 ಸೀಟಿಗೆ ಮಾತುಕತೆ


ಚೆನ್ನೈ: ತಮಿಳುನಾಡಿನಲ್ಲಿ ಅತಂತ್ರ ವಿಧಾನಸಭೆ ಸೃಷ್ಟಿ ಆಗಿರುವ ಕಾರಣ, ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿರುವ ನಟ ವಿಜಯ್ ಅವರ ಟಿವಿಕೆ ಪಕ್ಷವು ಕಾಂಗ್ರೆಸ್ ಹಾಗೂ ಸಣ್ಣಪುಟ್ಟ ಪಕ್ಷಗಳ ಜತೆ ಮೈತ್ರಿ ಕಸರತ್ತು ಆರಂಭಿಸಿದೆ. ಮೇ 7ಕ್ಕೆ ಪ್ರಮಾಣ ವಚನ ಸ್ವೀಕರಿಸುವ ಇರಾದೆಯನ್ನು ವಿಜಯ್ ವ್ಯಕ್ತಪಡಿಸಿದ್ದಾರೆಂದು ಗೊತ್ತಾಗಿದೆ. ಇದಕ್ಕೆ ಪೂರಕವಾಗಿ ಕಾಂಗ್ರೆಸ್ ನಾಯಕ ಕೆ.ಸಿ. ವೇಣುಗೋಪಾಲ್ ಪ್ರತಿಕ್ರಿಯಿಸಿ, ಮೈತ್ರಿ ಬಗ್ಗೆ ಬುಧವಾರ ಪಕ್ಷ ನಿರ್ಧರಿಸಲಿದೆ ಎಂದಿದ್ದಾರೆ.




ಸೋಮವಾರ ವಿಜಯ್ ಅಧ್ಯಕ್ಷತೆಯಲ್ಲಿ ಟಿವಿಕೆ ಶಾಸಕರ ಸಭೆ ನಡೆಯಿತು. ಈ ವೇಳೆ ಅವರನ್ನು ಶಾಸಕಾಂಗ ನಾಯಕ ಎಂದು ಆಯ್ಕೆ ಮಾಡಲಾಯಿತು. ↘ 10

ಪ.ಬಂಗಾಳ ಸಿಎಂ ಹುದ್ದೆಗಾಗಿ ನಾಲ್ವರ ನಡುವೆ ಸೆಣಸಾಟ

ಸುವೇಂದು, ದಿಲೀಪ್, ಪೌಲ್, ರೂಪಾ ಮೀಸಲು ಚರ್ಚೆ ನಡುವೆ ಸ್ತ್ರೀಗೆ ಪಟ್ಟ?



ಸುವೇಂದು



ದಿಲೀಪ್



ಅಗ್ನಿಮಿತ್ರಾ



ರೂಪಾ ಗಂಗೂಲಿ

ಕೋಲ್ಕತಾ: ಪ.ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚನೆ ಪ್ರಕ್ರಿಯೆಗಳು ಆರಂಭವಾಗಿವೆ. ರವೀಂದ್ರನಾಥ ಟ್ಯಾಗೋರ್ ಅವರ ಜನ್ಮದಿನವಾದ ಮೇ 9ರಂದು ಹೊಸ ಸಿಎಂ ಪ್ರಮಾಣವಚನ ಸ್ವೀಕಾರ ಸಾಧ್ಯತೆ ಇದೆ. ಸುವೇಂದು ಅಧಿಕಾರಿ, ಬಿಜೆಪಿ ಮಾಜಿ ರಾಜ್ಯಾಧ್ಯಕ್ಷ ದಿಲೀಪ್ ಘೋಷ್, ಅಗ್ನಿಮಿತ್ರಾ ಪೌಲ್ ಮತ್ತು ಮಹಾಭಾರತದ ದ್ರೌಪದಿ ಖ್ಯಾತಿಯ ರೂಪಾ ಗಂಗೂಲಿ ಹೆಸರು ಸಿಎಂ ಸ್ಥಾನಕ್ಕೆ ಕೇಳಿಬರುತ್ತಿದೆ. ↘ 10

ಖರ್ಗೆ ಹೇಳಿದ ಮೇಲೆ ಸಿಎಂ ಚರ್ಚೆ ಬೇಕಿಲ್ಲ: ಪ್ರಿಯಾಂಕ್

ಸಂದರ್ಭ, ಸನ್ನಿವೇಶ ಬರಲಿ ಅಂತ ಹೇಳಿದ್ದಾರೆ ಖರ್ಗೆ ಹೇಳಿದ ಮೇಲೆ ಮತ್ತೆ ಚರ್ಚೆ ಅಪ್ರಸ್ತುತ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ರಾಜ್ಯದಲ್ಲಿ ಮುಖ್ಯಮಂತ್ರಿ ಸ್ಥಾನ ಖಾಲಿಯಿಲ್ಲ ಎಂದು ಎಐಸಿಸಿ ಅಧ್ಯಕ್ಷರೇ ಹೇಳಿದ್ದಾರೆ. ಅವರೇ ಈ ರೀತಿ ಹೇಳಿದ ಮೇಲೆ ನಾವೆಲ್ಲ ಆ ವಿಚಾರ ಕುರಿತು ಮಾತನಾಡುವುದೇ ಅಪ್ರಸ್ತುತ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದ್ದಾರೆ.



ಸದಾಶಿವನಗರದ ತಮ್ಮ ನಿವಾಸದ ಬಳಿ ಮಂಗಳವಾರ ಸುದ್ದಿಗಾರರ ಜತೆ ಮಾತನಾಡಿ, ಸಿಎಂ ಸ್ಥಾನದ ವಿಚಾರವಾಗಿ ಸಂದರ್ಭ ಬಂದಾಗ ತೀರ್ಮಾನ ತೆಗೆದುಕೊಳ್ಳುತ್ತೇವೆಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಹೇಳಿದ್ದಾರೆ. ಅವರು ಹೇಳಿದ ಮೇಲೆ ಇನ್ನೇನು ಉಳಿಯಿತು. ಜತೆಗೆ ಮುಖ್ಯಮಂತ್ರಿ ಸ್ಥಾನ ಖಾಲಿಯಿಲ್ಲ ಎಂದಿದ್ದಾರೆ. ↘ 10

- ಎಲೆಕ್ಷನ್ ರಿಸಲ್ಟ್‌ಗೂ ಸಂಪುಟ ಪುನಾರಚನೆಗೂ ಸಂಬಂಧವಿಲ್ಲ
- ಸಿಎಂ ಸ್ಥಾನ ಖಾಲಿ ಇಲ್ಲವೆಂದು ಎಐಸಿಸಿ ಅಧ್ಯಕ್ಷರೇ ಸ್ಪಷ್ಟಪಡಿಸಿದ್ದಾರೆ
- ಸನ್ನಿವೇಶ ಬಂದಾಗ ತೀರ್ಮಾನ ತೆಗೆದುಕೊಳ್ಳುವ ಮಾತಾಡಿದ್ದಾರೆ
- ಆ ಬಗ್ಗೆ ಸ್ಪಷ್ಟನೆ ಬಳಿಕ ನಾವು ಮತ್ತೆ ಚರ್ಚೆ ನಡೆಸುವುದು ಅಪ್ರಸ್ತುತ
- ಸರ್ಕಾರಕ್ಕೆ 3 ವರ್ಷ ಆದಾಗ ಬದಲಾವಣೆ ಸಹಜ. ಸದ್ಯ ಆ ಚರ್ಚೆ ಇಲ್ಲ: ಪ್ರಿಯಾಂಕ್

77 ವರ್ಷದ ಸಿದ್ದು ದೇಶದ ಅತ್ಯಂತ ಹಿರಿಯ ಸಿಎಂ!

ಕೇರಳ ಸಿಎಂ ಸೋಲಿನ ಬಳಿಕ ಸಿದ್ದುಗೆ ಪಟ್ಟ ಪಿಣರಾಯಿ ಸ್ಥಾನವೀಗ ಕರ್ನಾಟಕ ಸಿಎಂಗೆ

ನವದೆಹಲಿ: ಇತ್ತೀಚೆಗಷ್ಟೇ 'ಕರ್ನಾಟಕದಲ್ಲಿ ಸುದೀರ್ಘಾವಧಿ ಮುಖ್ಯಮಂತ್ರಿ' ಎಂಬ ಪಟ್ಟವನ್ನು ಪಡೆದಿದ್ದ ಸಿದ್ದರಾಮಯ್ಯ (77) ಅವರು ಇದೀಗ ದೇಶದ ಅತಿ ಹಿರಿಯ ಸಿಎಂ ಆಗಿ ಹೊರಹೊಮ್ಮಿದ್ದಾರೆ. ಕೇರಳ ಸಿಎಂ ಆಗಿದ್ದ 82 ವರ್ಷದ ಪಿಣರಾಯಿ ವಿಜಯನ್ ರಾಜೀನಾಮೆಯಿಂದಾಗಿ ಅವರ ನಂತರದಲ್ಲಿದ್ದ ಸಿದ್ದರಾಮಯ್ಯ ಮೊದಲ ಸ್ಥಾನಕ್ಕೇರಿದ್ದಾರೆ.



ಈ ಪಟ್ಟಿಯಲ್ಲಿ ನಂತರದ ಸ್ಥಾನಗಳಲ್ಲಿ ಆಂಧ್ರಪ್ರದೇಶ ಸಿಎಂ ಚಂದ್ರಬಾಬು ನಾಯ್ಡು (75), ಮಿಜೋರಂನ ಲಾಲ್‌ದುಹೋಮಾ (74), ನಾಗಾಲ್ಯಾಂಡ್‌ನ ನೆಫ್ಯು ರಿಯೋ (74), ಪುದುಚೇರಿಯ ರಂಗಸಾಮಿ (74) ಇದ್ದಾರೆ. ↘ 10

- ಈವರೆಗೆ ದೇಶದ ಅತಿ ಹಿರಿಯ ಸಿಎಂ ಪಟ್ಟ ವಿಜಯನ್‌ಗಿತ್ತು (82)
- ಚುನಾವಣೆಯಲ್ಲಿ ಕೇರಳ ಸಿಎಂ ಸೋಲಿನ ಬಳಿಕ ಸಿದ್ದುಗೆ ಹಿರಿಮೆ
- ಕರ್ನಾಟಕದ ದೀರ್ಘ ಅವಧಿಯ ಸಿಎಂ ದಾಖಲೆಗೂ ಸಿದ್ದು ಪಾತ್ರ
- ಅರುಣಾಚಲ ಪ್ರದೇಶ ಪೇಮಾ ಖಂಡು (46) ಅತಿ ಕಿರಿಯ ಸಿಎಂ
- ತ.ನಾಡು ಮಾಜಿ ಸಿಎಂ ದಿ.ಕರುಣಾನಿಧಿಗೆ (92) ರಾಜ್ಯ ಆಳಿದ ಅತಿ ಹಿರಿಯ ನಾಯಕ

ಅಚ್ಚರಿ ಕಾಂಗ್ರೆಸ್, ಮಿತ್ರಪಕ್ಷಗಳಿಂದ ಸ್ಪರ್ಧಿಸಿದ್ದ ಮುಸ್ಲಿಂ ಅಭ್ಯರ್ಥಿಗಳ ಗೆಲುವಿನ ದರ ಶೇ.80 | ಮುಸ್ಲಿಮೇತರರು ಸ್ಪರ್ಧಿಸಿದ ಕಡೆ ಸೋಲೇ ಹೆಚ್ಚು

4 ರಾಜ್ಯಗಳಲ್ಲಿ ಕಾಂಗ್ರೆಸ್‌ಗೆ ಮುಸ್ಲಿಂ ಶಾಸಕರದ್ದೇ ಬಲ

ಅಸ್ಸಾಂನಲ್ಲಿ 19ರ ಪೈಕಿ 18, ಬಂಗಾಳದಲ್ಲಿ 2ಕ್ಕೆ 2, ತ.ನಾಡಲ್ಲಿ 1, ಕೇರಳದಲ್ಲಿ 35ರ ಪೈಕಿ 30 ಜನರಿಗೆ ಗೆಲುವು

ಗುವಾಹಟಿ: ಪಂಚರಾಜ್ಯಗಳ ಚುನಾವಣಾ ಫಲಿತಾಂಶ ಪ್ರಕಟವಾದ ಬೆನ್ನಲ್ಲೇ, ಐದೂ ರಾಜ್ಯಗಳಲ್ಲಿ ಕಾಂಗ್ರೆಸ್‌ನಿಂದ ಗೆದ್ದ ಅಭ್ಯರ್ಥಿಗಳಲ್ಲಿ ಬಹುತೇಕರು ಮುಸ್ಲಿಮರು ಎಂಬ ಅಚ್ಚರಿಯ ವಿಚಾರ ಬೆಳಕಿಗೆ ಬಂದಿದೆ.



ಅಸ್ಸಾಂನ 126 ಶಾಸಕ ಸ್ಥಾನಗಳಲ್ಲಿ ಕಾಂಗ್ರೆಸ್ ಕೇವಲ 19 ಸ್ಥಾನಗಳನ್ನು ಗೆದ್ದಿದೆ. ಈ 19 ಮಂದಿಯಲ್ಲಿ 18 ಜನ ಮುಸ್ಲಿಂ ಅಭ್ಯರ್ಥಿಗಳು ಎಂಬುದು ಗಮನಾರ್ಹ. ಪಕ್ಷವು ಒಟ್ಟು 20 ಮುಸ್ಲಿಂ ಅಭ್ಯರ್ಥಿಗಳನ್ನು ಕಣಕ್ಕಿಳಿಸಿತ್ತು. ಇವರಲ್ಲಿ ಇಬ್ಬರು ಮಾತ್ರ ಪರಾಜಿತರಾಗಿದ್ದಾರೆ. ಇದಕ್ಕೆ ವ್ಯತಿರಿಕ್ತವಾಗಿ, ಪಕ್ಷವು ಕಣಕ್ಕಿಳಿಸಿದ 79 ಮುಸ್ಲಿಮೇತರ ಅಭ್ಯರ್ಥಿಗಳಲ್ಲಿ ಒಬ್ಬರು ಮಾತ್ರ ಗೆಲ್ಲುವಲ್ಲಿ ಯಶಸ್ವಿಯಾಗಿದ್ದಾರೆ.

ಇನ್ನು ಕಾಂಗ್ರೆಸ್‌ನ ಮಿತ್ರಪಕ್ಷ ರೈಜೋರ್ ದಳ 2 ಸ್ಥಾನಗಳನ್ನು ಗೆದ್ದಿದೆ. ಅದರ ವಿಜೇತ ಅಭ್ಯರ್ಥಿಗಳಲ್ಲಿ ಒಬ್ಬರು ಮುಸ್ಲಿಂ ಆಗಿದ್ದರೆ, ಮತ್ತೊಬ್ಬರು ಅಖಿಲ್ ಗೊಗೊಯ್. ಇವರು ಮಾವೋವಾದಿಗಳ ಸಂಪರ್ಕದ ಆರೋಪದ ಮೇಲೆ ರಾಷ್ಟ್ರೀಯ ತನಿಖಾ ಸಂಸ್ಥೆಯಿಂದ ತನಿಖೆ ಎದುರಿಸಿದ್ದಾರೆ.

ಕೇರಳ: ಕೇರಳದ 140 ಸ್ಥಾನಗಳ ಪೈಕಿ 35 ಮುಸ್ಲಿಂ ಅಭ್ಯರ್ಥಿಗಳು ವಿಜಯಶಾಲಿಗಳಾಗಿದ್ದಾರೆ. ಇವರಲ್ಲಿ 30 ಜನ ಕಾಂಗ್ರೆಸ್ ನೇತೃತ್ವದ ಯುಡಿಎಫ್‌ನಿಂದ ಸ್ಪರ್ಧಿಸಿದ್ದರು. ಈ ಮಿತ್ರಕೂಟದಲ್ಲಿ 8 ಕಾಂಗ್ರೆಸ್ ಶಾಸಕರು ಮುಸ್ಲಿಮರು, ಉಳಿದ 22 ಶಾಸಕರು ಯುಡಿಎಫ್‌ನ ಮುಖ್ಯ ಮಿತ್ರಪಕ್ಷವಾದ ಇಂಡಿಯನ್ ಯೂನಿಯನ್ ಮುಸ್ಲಿಂ ಲೀಗ್‌ಗೆ ಸೇರಿದವರು. ↘ 6

ಕೇರಳ: ಈ ಸಲ 6 ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಗೆ 2ನೇ ಸ್ಥಾನ

ತಿರುವನಂತಪುರಂ: ಕೇರಳದಲ್ಲಿ 3 ಸ್ಥಾನಗಳನ್ನು ತನ್ನದಾಗಿಸಿಕೊಳ್ಳುವ ಮೂಲಕ ಐತಿಹಾಸಿಕ ಜಯವನ್ನು ಗಳಿಸಿರುವ ಬಿಜೆಪಿ, 6 ಕ್ಷೇತ್ರಗಳಲ್ಲಿ 2ನೇ ಸ್ಥಾನ ಪಡೆಯುವಲ್ಲಿ ಯಶಸ್ವಿಯಾಗಿದೆ. ಈ ಮೂಲಕ, ದಶಕದ ಹಿಂದಷ್ಟೇ ರಾಜ್ಯದಲ್ಲಿ ಖಾತೆ ತೆರೆದಿದ್ದ ಪಕ್ಷ ಈ ಬಾರಿ ಉತ್ತಮ ಪ್ರದರ್ಶನ ನೀಡಿದೆ. ಇದು ಮುಂದಿನ ಚುನಾವಣೆಗಳಲ್ಲಿ ಪಕ್ಷ ಮತ್ತಷ್ಟು ಸ್ಥಾನಗಳನ್ನು ಗೆಲ್ಲುವ ಮತ್ತು ರಾಜ್ಯ ಕಾರಣದಲ್ಲಿ ತನ್ನದೇ ಛಾಪು ಮೂಡಿಸುವತ್ತ ಮಹತ್ವದ ಬೆಳವಣಿಗೆ ಎಂದು ವಿಶ್ಲೇಷಿಸಲಾಗಿದೆ. ತಿರುವಳ್ಳ, ಪಾಲಕ್ಕಾಡ್, ಮಲಂಪುಳ, ಆಟ್ಟಿಂಗಲ್, ಕಾಸರಗೋಡು ಮತ್ತು ಮಂಜೇಶ್ವರದಲ್ಲಿ 2ನೇ ಸ್ಥಾನ ಪಡೆದಿರುವ ಬಿಜೆಪಿ, ಕಳೆದ ಚುನಾವಣೆಗೆ ಹೋಲಿಸಿದರೆ ಮತ ಗಳಿಕೆ ಸುಧಾರಣೆ ಕಂಡಿದೆ.



ಪ.ಬಂಗಾಳದ 3 ಮುಸ್ಲಿಂ ಬಾಹುಳ್ಯ ಜಿಲ್ಲೆಗಳಲ್ಲೂ ಬಿಜೆಪಿ ಭಾರೀ ಹವಾ!

ಕೋಲ್ಕತಾ: ಬಂಗಾಳದ ಮುಸ್ಲಿಂ ಪ್ರಾಬಲ್ಯದ ಮುರ್ಷಿದಾಬಾದ್, ಮಾಲ್ಡಾ, ಉತ್ತರ ದಿನಾಜ್‌ಪುರನಲ್ಲಿ ಬಿಜೆಪಿ ಭರ್ಜರಿ ಪ್ರದರ್ಶನ ತೋರಿದೆ. 3 ಜಿಲ್ಲೆಯ 43 ಕ್ಷೇತ್ರಗಳಲ್ಲಿ 2021ರಲ್ಲಿ 8 ಸ್ಥಾನ ಗೆದ್ದಿದ್ದ ಬಿಜೆಪಿ ಬಲ ಈಗ 19ಕ್ಕೆ ಏರಿದೆ. 35 ಸ್ಥಾನ ಹೊಂದಿದ್ದ ಟಿಎಂಸಿ ಬಲ 22ಕ್ಕೆ ಕುಸಿದಿದೆ. ಮುಸ್ಲಿಂ ಮತಗಳ ವಿಭಜನೆ ಬಿಜೆಪಿಗೆ ನೆರವಾಗಿದೆ.

ಬಂಗಾಳದ 23 ಜಿಲ್ಲೆಗಳ ಪೈಕಿ 9 ಕಡೆ ಟಿಎಂಸಿ ಶೂನ್ಯ ಸಂಪಾದನೆ

ಕೋಲ್ಕತಾ: 15 ವರ್ಷಗಳ ಕಾಲ ಪಶ್ಚಿಮ ಬಂಗಾಳ ಆಳಿದ್ದ ಟಿಎಂಸಿ ಈ ಬಾರಿಯ ಬಿಜೆಪಿ ಅರ್ಭಟಕ್ಕೆ ಧೂಳೀಪಟವಾಗಿದೆ. ರಾಜ್ಯದ 23 ಜಿಲ್ಲೆಗಳ ಪೈಕಿ 9 ಜಿಲ್ಲೆಗಳಲ್ಲಿ ಸೊನ್ನೆ ಸುತ್ತಿದೆ. ಈ ಮೂಲಕ 68 ಕ್ಷೇತ್ರಗಳಲ್ಲಿ ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದೆ.

ತ.ನಾಡಿನಲ್ಲಿ ಟಿವಿಕೆಯಿಂದ ತುರುವೇಕೆರೆ ವ್ಯಕ್ತಿ ವಿಜಯ!

ಉದ್ಯಮಿ ಎನ್. ಸುನಿಲ್ ಆನಂದ್‌ಗೆ ಜಯ ಮೆಟ್ಟುಪಾಳ್ಯಂನಿಂದ ವಿಧಾನಸಭೆಗೆ ಪ್ರವೇಶ

ಚೆನ್ನೈ/ತುರುವೇಕೆರೆ: ತಮಿಳುನಾಡಿನಲ್ಲಿ ನಟ ವಿಜಯ್ ಅವರ ಟಿವಿಕೆ ಪಕ್ಷ ಜಯಭೇರಿ ಬಾರಿಸಿದ ಬೆನ್ನಲ್ಲೇ, ಕರ್ನಾಟಕದ ತುಮಕೂರು ಜಿಲ್ಲೆಯ ತುರುವೇಕೆರೆಯ ವ್ಯಕ್ತಿಯೊಬ್ಬರು ಟಿವಿಕೆಯಿಂದ ಸ್ಪರ್ಧಿಸಿ ಗೆಲುವು ಸಾಧಿಸಿದ್ದಾರೆ ಎಂಬ ಅಚ್ಚರಿಯ ವಿಷಯ ತಿಳಿದುಬಂದಿದೆ.



ಎನ್. ಸುನೀಲ್ ಆನಂದ್ ಇಂಥ ಗೆಲುವು ಸಾಧಿಸಿದವರು. 75,664 ಮತ ಪಡೆದ ಇವರು ಡಿಎಂಕೆ ಹಾಗೂ ಎಐಎಡಿಎಂಕೆ ಎರಡೂ ಪಕ್ಷದವರನ್ನು ಮಣಿಸಿ, 7778 ಮತಗಳ ಅಂತರದಿಂದ ಮೆಟ್ಟುಪಾಳ್ಯಂನಲ್ಲಿ ವಿಜಯ ಸಾಧಿಸಿದ್ದಾರೆ. ↘ 10

- ಸುನೀಲ್ ಅವರ ತವರೂರು ತುರುವೇಕೆರೆ ತಾಲೂಕಿನ ಹೊಡಿಕೇಘಟ್ಟ ಗ್ರಾಮ
- ಕೆಲ ದಶಕಗಳ ಹಿಂದೆ ಇವರ ಅಜ್ಜ ತಮಿಳುನಾಡಿನ ಮೆಟ್ಟುಪಾಳ್ಯಂಗೆ ವಲಸೆ
- ರಿಯಲ್ ಎಸ್ಟೇಟ್ ಸೇರಿ ಹಲವು ಉದ್ಯಮ ನಡೆಸುತ್ತಿರುವ ಕನ್ನಡಿಗ
- ಮೊದಲಿನಿಂದಲೂ ವಿಜಯ್ ಜತೆ ಗುರುತಿಸಿಕೊಂಡಿದ್ದ ಎನ್.ಸುನೀಲ್ ಆನಂದ್
- ಚುನಾವಣೆಯಲ್ಲಿ 75664 ಮತ ಪಡೆದು ಭರ್ಜರಿ ಜಯ

ಗರಿಷ್ಠ 37°c | ಕನಿಷ್ಠ 24°c

ಸುದ್ದಿ ಸಿಂಚನ

ಹಣ ನೀಡದ ಸಾಧುನವರ ಸೊಸೈಟಿಗೆ ದಂಡ

ಧಾರವಾಡ: ತಾಲೂಕಿನ ಹಾರೋಬೆಳವಡಿಯ ಏಳು ಜನರಿಗೆ ಠೇವಣಿ ಹಣ ಕೊಡದೇ ಸತಾಯಿಸಿದ್ದ ಡಾ. ವಿ. ಎಸ್. ಸಾಧುನವರ ಸೊಸೈಟಿಗೆ ದಂಡ ಮತ್ತು ಪರಿಹಾರ ನೀಡಲು ಗ್ರಾಹಕರ ಆಯೋಗ ಆದೇಶಿಸಿದೆ. ಹಾರೋಬೆಳವಡಿಯ ರಾಮಪ್ಪ, ಶಂಕರವ್ವ, ವಿಜಯಾ, ಗಿರಿಜವ್ವ, ಶಾಂತವ್ವ, ರತ್ನ ಹಾಗೂ ಶಿವಲೀಲಾ ಸಾಧುನವರ ಸೊಸೈಟಿಯ ಸದಸ್ಯರಾಗಿ ವಿವಿಧ ಮೊತ್ತಗಳ ಠೇವಣಿ ಮತ್ತು ಉಳಿತಾಯ ಖಾತೆ ಹೊಂದಿದ್ದರು. ವೈಯಕ್ತಿಕ ಅಡಚಣೆಯಿಂದ ಹಣ ಬೇಕಾಗಿದ್ದರಿಂದ ಠೇವಣಿ ಹಾಗೂ ಉಳಿತಾಯ ಖಾತೆಯಲ್ಲಿರುವ ಹಣ ಮರಳಿಸುವಂತೆ ಸಾಕಷ್ಟು ಸಲ ಕೇಳಿದರೂ ಸೊಸೈಟಿ ಹಣ ನೀಡಿರಲಿಲ್ಲ. ಆದ್ದರಿಂದ ಏಳು ಜನರು ಸೊಸೈಟಿ ಸೇವಾ ನ್ಯೂನತೆ ಎಸಗಿದೆ ಎಂದು ಸೊಸೈಟಿ ಅಧ್ಯಕ್ಷ ವಿ.ಎಸ್. ಸಾದುನವರ ವಿರುದ್ಧ ದೂರು ನೀಡಿದ್ದರು. ದೂರುಗಳ ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷ ಈಶಪ್ಪ ಭೂತೆ ಹಾಗೂ ಸದಸ್ಯರಾದ ವಿಶಾಲಾಕ್ಷಿ ಬೋಳಶೆಟ್ಟಿ, ಸೊಸೈಟಿಯಲ್ಲಿ ಎಫ್.ಡಿ ಮತ್ತು ಉಳಿತಾಯ ಖಾತೆ ಹೊಂದಿದ್ದು ದಾಖಲೆ ಮೂಲಕ ಗೊತ್ತಾಗಿದೆ. ಅಲ್ಲದೇ ದೂರುದಾರರಿಗೆ ಹಣದ ಅವಶ್ಯಕತೆ ಇದ್ದು ಮರಳಿಸದೇ ಇರುವುದು ಗ್ರಾಹಕರ ರಕ್ಷಣಾ ಕಾಯ್ದೆಯಡಿ ಸೇವಾ ನ್ಯೂನತೆ. ಎಫ್.ಡಿ ಮತ್ತು ಉಳಿತಾಯ ಖಾತೆ ಹಾಗೂ ಕ್ಯಾಶ್ ರ್‌ಟಿಫಿಕೇಟ್‌ನಲ್ಲಿದ್ದ ₹ 37 ಲಕ್ಷವನ್ನು ಬಡ್ಡಿಯೊಂದಿಗೆ ಲೆಕ್ಕ ಹಾಕಿ ದೂರುದಾರರಿಗೆ ತಿಂಗಳ ಒಳಗಾಗಿ ಹಿಂದಿರುಗಿಸುವಂತೆ ಆಯೋಗ ಆದೇಶಿಸಿದೆ. ಜತೆಗೆ ದೂರುದಾರರಿಗೆ ಆಗಿರುವ ಅನಾನುಕೂಲ, ತೊಂದರೆ ಹಾಗೂ ಮಾನಸಿಕ ತೊಂದರೆಗಾಗಿ ₹ 50 ಸಾವಿರ ಪರಿಹಾರ ಮತ್ತು ₹ 10 ಸಾವಿರ ಪ್ರಕರಣದ ವೆಚ್ಚ ಕೊಡುವಂತೆ ಆಯೋಗ ಸೊಸೈಟಿ ಅಧ್ಯಕ್ಷ ವಿರೂಪಾಕ್ಷಿ ಸಾಧುನವರವರಿಗೆ ನಿರ್ದೇಶಿಸಿದೆ.

ಇಂದು ಉಪನ್ಯಾಸ

ಧಾರವಾಡ: ಕರ್ನಾಟಕ ವಿದ್ಯಾವರ್ಧಕ ಸಂಘದ ಶಿಕ್ಷಣ ಮಂಟಪವು ಕುಂದಗೋಳ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮೇ 6ರಂದು ಬೆಳಗ್ಗೆ 11ಕ್ಕೆ ವಿದ್ಯಾರ್ಥಿಗಳಿಗಾಗಿ 'ಹದಿಹರೆಯದ ಸಮಸ್ಯೆಗಳು ಮತ್ತು ಪರಿಹಾರೋಪಾಯಗಳು' ಕುರಿತು ಉಪನ್ಯಾಸ ಹಾಗೂ ಸಂವಾದ ಏರ್ಪಡಿಸಿದೆ. ಗುಡಗೇರಿ ಕಾಲೇಜಿನ ಪ್ರಾಚಾರ್ಯ ಪ್ರೊ. ಗಂಗಾಧರ ಗುಮ್ಮಗೋಳಮಠ ಉದ್ಘಾಟಕರಾಗಿ ಆಗಮಿಸಲಿದ್ದು ಪ್ರಾಚಾರ್ಯ ಡಾ. ಬಿ. ಎಸ್. ಶಿರಿಯಪ್ಪಗೌಡರ ಅಧ್ಯಕ್ಷತೆ ವಹಿಸುವರು. ಬಿಇಒ ಸಂಜೀವಕುಮಾರ ಬೆಳವಟಗಿ ಉಪನ್ಯಾಸ ನೀಡುವರು ಎಂದು ಪ್ರಕಟಣೆ ತಿಳಿಸಿದೆ.

ಬೈಕ್ ಸ್ಕಿಡ್ ಆಗಿ ಮಹಿಳೆಗೆ ಗಾಯ



ಅಣ್ಣಿಗೇರಿ: ಪಟ್ಟಣದಿಂದ ಮಜ್ಜಿಗುಡ್ಡ ಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ಸ್ಕಿಡ್ ಆಗಿ ಮಹಿಳೆ ಕೆಳಗೆ ಬಿದ್ದು ಗಾಯಗೊಂಡ ಘಟನೆ ನಡೆದಿದೆ. ಈ ಘಟನೆಯಿಂದ ತೀವ್ರ ಅಸ್ವಸ್ಥಳಾಗಿ ಪ್ರಜ್ಞೆ ತಪ್ಪಿದ ಮಹಿಳೆಯನ್ನು ಗ್ರಾಮಸ್ಥರು ಉಪಚರಿಸಿ ಆಸ್ಪತ್ರೆಗೆ ಸೇರಿಸಿದ್ದಾರೆ. ಹಲವು ದಿನಗಳಿಂದ ಅಣ್ಣಿಗೇರಿಯಿಂದ ಮಜ್ಜಿಗುಡ್ಡದ ರಸ್ತೆಯು ಸಂಪೂರ್ಣ ಹಾಳಾಗಿ ವಾಹನ ಸಂಚರಿಸದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಸುಮಾರು 800 ಮೀಟರ್ ವರೆಗೆ ರಸ್ತೆಯಲ್ಲಿ ಖಡಿ ಹಾಕಿ ಹಾಗೆ ಬಿಟ್ಟಿದ್ದು, ಇದರ ಮೇಲೆ ಸಂಚರಿಸುವ ಬೈಕ್‌ಗಳು ನಿಯಂತ್ರಣ ತಪ್ಪಿ ಕೆಳಗೆ ಬಿದ್ದು ಹಲವು ಸವಾರರು ಗಾಯಗೊಂಡಿರುವ ಘಟನೆ ಸಾಕಷ್ಟು ನಡೆದಿವೆ. ಆದಷ್ಟು ಬೇಗನೆ ಈ ರಸ್ತೆ ದುರಸ್ತಿಗೊಳಿಸುವ ಮೂಲಕ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡುವಂತೆ ಗ್ರಾಮಸ್ಥರು ಒತ್ತಾಯಿಸಿದ್ದಾರೆ.

ಪ್ರಸರಣ ವಿಭಾಗ

ಕನ್ನಡಪ್ರಭ ಪತ್ರಿಕೆ ಬಂದಿಲ್ಲವೇ? ತಡವಾಗಿ ಬರುತ್ತಿದೆಯೇ?
ನಿಮ್ಮ ಮನೆಗೆ ಪತ್ರಿಕೆ ಹಾಕಿಸಿಕೊಳ್ಳಬೇಕೇ?
ಸಂಪರ್ಕಿಸಿ: ನಿಂಗರಾಜ ಎಚ್.
9449141988
0836-2252250



ಧಾರವಾಡ ಕರ್ನಾಟಕ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪಡೆದ ಮಜೇಥಿಯಾ ಫೌಂಡೇಶನ್ ಸಂಸ್ಥಾಪಕ ಜೀತೇಂದ್ರ ಮಜೇಥಿಯಾ ಅವರನ್ನು ಹೊರಕೇರಿ ಮಾಸ್ತರ ಶಿಕ್ಷಣ ಪ್ರತಿಷ್ಠಾನ, ರಾಣಿಚೆನ್ನಮ್ಮ ಪರಿಸರ ಸೇವಾ ಸಮಿತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಸೋಹನ ಹೊರಕೇರಿ ಸೇರಿ ಹಲವರಿದ್ದರು.



ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಆಯೋಜಿಸಿದ್ದ ದತ್ತಿಯಲ್ಲಿ ಸಂಶೋಧಕ ಡಾ. ಆರ್.ಎಂ. ಷಡಕ್ಷರಯ್ಯ ದಂಪತಿ ಸನ್ಮಾನಿಸಲಾಯಿತು. ಈ ವೇಳೆ ಹೋರಾಟಗಾರ ತಾತಾಸಾಹೇಬ್ ಬಾಂಗಿ, ಕೆ.ಬಿ. ಪಾಟೀಲ ಕುಲಕರ್ಣಿ, ಡಾ. ಸುಭಾಸ ಹಿರೇಮಠ ಸೇರಿದಂತೆ ಇತರರು ಇದ್ದರು.

KP



ಅಕ್ರಮವಾಗಿ ಸಾಗಿಸುತ್ತಿದ್ದ ಗೋವುಗಳ ರಕ್ಷಿಸಿದ ಶ್ರೀರಾಮಸೇನೆ

ಹುಬ್ಬಳ್ಳಿ: ಅಕ್ರಮವಾಗಿ ಗೋವು ಸಾಗಾಟದ ಪ್ರಕರಣ ಭೇದಿಸುವಲ್ಲಿ ಶ್ರೀರಾಮಸೇನಾ ಕಾರ್ಯಕರ್ತರು ಯಶಸ್ವಿಯಾಗಿದ್ದು, ಅಕ್ರಮ ಗೋವು ಸಾಗಾಟದ ವಾಹನವನ್ನು ಪೊಲೀಸರಿಗೆ ಒಪ್ಪಿಸಿದ್ದಾರೆ. ಹುಬ್ಬಳ್ಳಿಯ ಕಾರವಾರ ರಸ್ತೆಯಲ್ಲಿ ಅಕ್ರಮವಾಗಿ ಕಸಾಯಿಖಾನೆಗೆ ಗೋವುಗಳನ್ನು ಸಾಗಿಸುತ್ತಿದ್ದ ವೇಳೆ ಶ್ರೀರಾಮ ಸೇನಾ ಪ್ರಮುಖ ಕಾರ್ಯಕರ್ತರು ತಡೆ ಹಿಡಿದು ಹಳೇ ಹುಬ್ಬಳ್ಳಿ ಪೊಲೀಸರಿಗೆ ಒಪ್ಪಿಸಿದ್ದಾರೆ. ಇನ್ನೂ ತಡೆ ಹಿಡಿದ ವಾಹನ ಹಾಗೂ ತಪ್ಪಿತಸ್ಥರ ವಿರುದ್ಧ ದೂರು ನೀಡಿದ್ದು, ಪೊಲೀಸರು ತನಿಖೆ ಮುಂದುವರಿಸಿದ್ದಾರೆ.

ಸಾಧನಕೇರಿ ಒಳಚರಂಡಿ ರಹಸ್ಯ ಬಯಲು!

ಉದ್ಯಾನವನದ ವಾಕಿಂಗ್ ಪಾತ್‌ನ ಹತ್ತು ಅಡಿ ಕೆಳಗಿದ್ದ ಒಳಚರಂಡಿ ಮಾರ್ಗ | ಮಾರ್ಗ ಮುಚ್ಚಿದ್ದರಿಂದ ಕೆರೆಗೆ ಸೇರುತ್ತಿತ್ತು ಕೊಳಚೆ ನೀರು | ಈಗ ಪತ್ತೆಯಾಗಿರುವ ಮಾರ್ಗ ಸುಧಾರಣೆ, ಉದ್ಯಾನವನ ಅಭಿವೃದ್ಧಿ ಈಗಿನ ಬೇಡಿಕೆ

• **ಬಸವರಾಜ ಹಿರೇಮಠ**
ಕನ್ನಡಪ್ರಭ ವಾರ್ತೆ ಧಾರವಾಡ

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ದ.ರಾ. ಬೇಂದ್ರೆ ಹೆಸರಿನಲ್ಲಿರುವ ಸಾಧನಕೇರಿಯ ಬಾರೋ ಸಾಧನಕೇರಿ ಕೆರೆ ಹಾಗೂ ಉದ್ಯಾನವನಕ್ಕೆ ಕಂಟಕವಾಗಿರುವುದು ಕೊಳಚೆ ನೀರು. ಈ ಚರಂಡಿ ನೀರನ್ನು ಸರಾಗವಾಗಿ ಹೊರ ಹಾಕಲು 20 ವರ್ಷದ ಹಿಂದೆ ನಿರ್ಮಿಸಿದ್ದ ಒಳಚರಂಡಿ ವ್ಯವಸ್ಥೆ ರಹಸ್ಯ ಕೊನೆಗೂ ಬಯಲಾಗಿದೆ.

ನಿತ್ಯ ಕೆರೆಗೆ ಹರಿದು ಬರುತ್ತಿರುವ ಸಾಧನಕೇರಿ ಹಾಗೂ ಮೇಲಿನ ಬಡಾವಣೆಗಳ ಚರಂಡಿ ನೀರು, ಆದರಿಂದ ಸಂಪೂರ್ಣ ಹಾಳಾಗಿರುವ ಕೆರೆ ಹಾಗೂ ಉದ್ಯಾನವನದ ಸ್ಥಿತಿ ಅರಿತ ಸ್ಥಳೀಯರಾದ ವೆಂಕಟೇಶ ತೆಲಗಾರ ಎಂಬುವರು ಪಾಲಿಕೆ ಅಧಿಕಾರಿಗಳ ಬೆನ್ನು ಬಿದ್ದು, 2007ರಲ್ಲಿ ಮೊದಲ ಬಾರಿಗೆ ಕೆರೆ ಹಾಗೂ ಉದ್ಯಾನ ನಿರ್ಮಾಣದ ವೇಳೆ ಹಾಕಿದ್ದ ಸುಮಾರು ಹತ್ತು ಅಡಿ ಭೂಮಿ ಒಳಗಿರುವ ಒಳಚರಂಡಿ ಮಾರ್ಗವನ್ನು ಇದೀಗ ಪತ್ತೆ ಹಚ್ಚಿದ್ದಾರೆ. ಡಾ. ಎಂ. ಎಂ. ಕಲಬುರ್ಗಿ ಅವರು ದ.ರಾ. ಬೇಂದ್ರೆ ಟ್ರಸ್ಟ್ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಬೇಂದ್ರೆ ಭವನ ಸೇರಿದಂತೆ ಅದ್ಭುತವಾಗಿ ಬಾರೋ ಸಾಧನಕೇರಿ ಕೆರೆ ಹಾಗೂ ಉದ್ಯಾನವನ ನಿರ್ಮಿಸಿ ದ್ದರು. ಯಾವುದೇ ಕಾರಣಕ್ಕೂ ಚರಂಡಿ ನೀರು ಈ ಕೆರೆಗೆ ಹರಿದು ಬರದಂತೆ ಆಗಲೇ, ದುರ್ಗಾದೇವಿ ದೇವಸ್ಥಾನ ಹಿಂಬದಿ ರಾಜಕಾಲುವೆಯಿಂದ ಕೆರೆಯ ಪಾತ್ ವೇ ಅಡಿ ಕೊಳಚೆ ನೀರು ನೇರವಾಗಿ ಕೆರೆಯ ಕೋಡಿ ಹರಿದು ಹೋಗುವ ಜಾಗಕ್ಕೆ ಸಂಪರ್ಕ ಕಲ್ಪಿಸಲಾಗಿತ್ತು.

ಆದರೆ, ದಿನಗಳೆದಂತೆ ಒಳಗಿದ್ದ ಒಳಚರಂಡಿ ನಿರ್ವಹಿಸದ ಹಿನ್ನೆಲೆ ಅದು ಮುಚ್ಚಿ ದೊಡ್ಡ ಪ್ರಮಾಣದಲ್ಲಿ ಕೊಳಚೆ ನೀರು ಕೆರೆಯ ಒಡಲು ಸೇರುತ್ತಿದೆ. ಹೀಗಾಗಿ ಈ ಕೆರೆಗೆ ಎಷ್ಟು ಕೋಟಿ ವೆಚ್ಚ ಮಾಡಿದರೂ ಸುಧಾರಣೆ ಕಂಡಿರಲಿಲ್ಲ. ಇತ್ತೀಚೆಗೆ ₹ 4.5 ಕೋಟಿ ವೆಚ್ಚದಲ್ಲಿ ಕೆರೆ ಹೂಳು ತೆಗೆದು ಅಭಿವೃದ್ಧಿ ಮಾಡಿದರೂ ಯಾವ ಪ್ರಯೋಜನವಾಗಿಲ್ಲ.

ಒಳಚಂರಡಿ ವ್ಯವಸ್ಥೆ ಸರಿಪಡಿಸಿ: ವಾಯು ವಿಹಾರ ಹಾಗೂ ಉದ್ಯಾನವನಕ್ಕೆ ಬರುವ ಜನರು ಮೂಗು ಮುಚ್ಚಿಕೊಂಡು ಹೋಗಬೇಕಾದ ಸ್ಥಿತಿ ಇದ್ದು ಭವಿಷ್ಯದಲ್ಲಿ ಈ ಕೆರೆ ಹಾಗೂ ಉದ್ಯಾನವನ ಉಳಿಯಬೇಕಾದರೆ ಈಗ ಪತ್ತೆಯಾಗಿರುವ ಒಳಚರಂಡಿ ವ್ಯವಸ್ಥೆ ಸರಿಪಡಿಸಬೇಕಿದೆ ಎನ್ನುವುದು ಕೆರೆ, ಉದ್ಯಾನವನ ಪಕ್ಕದ ಹುಬ್ಳೀಕರ ಪ್ಲಾಟ್ ನಿವಾಸಿಗಳ ಆಗ್ರಹ.

ಕೊಳಚೆ ನೀರು ತಡೆದರೆ ಸಾಧನಕೇರಿ ಕೆರೆ ತಾನಾಗಿಯೇ ಅಭಿವೃದ್ಧಿ ಆಗಲಿದೆ. ಈ ಹಿನ್ನೆಲೆಯಲ್ಲಿ ಉದ್ಯಾನದ ನೀಲನಕ್ಷೆ ಸಿಗದೇ ಇದ್ದರೂ ಸ್ಥಳೀಯರ ಸಹಕಾರದಿಂದ ಉದ್ಯಾನವನದಲ್ಲಿದ್ದ ಒಳಚರಂಡಿ ಮಾರ್ಗ ಪತ್ತೆ ಮಾಡಲಾಗಿದೆ. ಜತೆಗೆ ಅದನ್ನು ಸರಿಪಡಿಸಿ, ಮಂಗಳಗಟ್ಟಿ ಪ್ಲಾಟ್ ಮೂಲಕ ಹರಿದು ಬರುವ ಕಲುಷಿತ ನೀರು, ತ್ಯಾಜ್ಯವನ್ನು ನೇರವಾಗಿ ಕೆರೆಯಿಂದ ಹೊರಕಳುಹಿಸುವ ಯೋಜನೆ ಹಾಕಲಾಗಿದೆ. ಇದರೊಂದಿಗೆ ಪೊಲೀಸ್ ಇಲಾಖೆ ಅಡಿಯಲ್ಲಿರುವ ದುರ್ಗಾದೇವಿ ದೇವಸ್ಥಾನದಿಂದ ಕೆರೆಗೆ ಸೇರುವ ಕೊಳಚೆ ನೀರು ಸಹ ತಡೆಯಲು ಇಲಾಖೆಗೆ ತಿಳಿಸಲಾಗಿದೆ ಎಂದು ಪಾಲಿಕೆಯ ಸಹಾಯಕ ಆಯುಕ್ತ ಅರವಿಂದ ಜಮಖಂಡಿ ಮಾಹಿತಿ ನೀಡಿದರು.

ಕೆರೆಗೆ ಬರುವ ಚರಂಡಿ ನೀರನ್ನು ನೇರವಾಗಿ ಕೋಡಿ ಪ್ರದೇಶಕ್ಕೆ ಹೊರ ಹಾಕುವುದಲ್ಲದೇ, ಈ ಮೊದಲಿದ್ದ ಸಂಗೀತ ಕಾರಂಜಿ ಮರು ಆರಂಭಿಸುವುದು, ಉದ್ಯಾನವನದಲ್ಲಿನ ಪ್ರತಿಮೆಗಳ ನಿರ್ವಹಣೆ, ಮಕ್ಕಳಿಂದ ಹಿಡಿದು ದೊಡ್ಡವರನ್ನು ಮನರಂಜಿಸುವ ಬೋಟಿಂಗ್ ವ್ಯವಸ್ಥೆ, ವಿವಿಧ ಆಟ, ಫುಡ್ ಕೋರ್ಟ್, ವಿಶ್ರಾಂತಿ ಗೃಹಗಳನ್ನು ಮರು ಆರಂಭಿಸಬೇಕು. ಈ ಮೂಲಕ ಬೇಂದ್ರೆ ಹೆಸರಿನ ಈ ಕೆರೆ, ಉದ್ಯಾನವನ ಮಾದರಿಯಾಗಿ ಮಾಡಬೇಕು ಎಂಬುದು ಸ್ಥಳೀಯ ಆಗ್ರಹ.



ಸಾಧನಕೇರಿ ಕೆರೆ ಪಕ್ಕದ ಉದ್ಯಾನವನ ವಾಕಿಂಗ್ ಪಾತ್ ಅಡಿಯಲ್ಲಿರುವ ಒಳಚರಂಡಿ ಮಾರ್ಗ.

> ತ್ಯಾಜ್ಯ ಹಾಗೂ ಕೊಳಚೆ ನೀರಿನಿಂದ ತುಂಬಿರುವ ಸಾಧನಕೇರಿ ಕೆರೆ ನೋಡಿ ಮಮ್ಮಲ ಮರಗುತ್ತಿದ್ದೇವೆ. ಕೆರೆಯ ಪಕ್ಕದ ಬಡಾವಣೆಗೂ ಕೊಳಚೆ ನೀರಿನ ವಾಸನೆ. ಆಡಳಿತ ವ್ಯವಸ್ಥೆಗೆ ದೂರು ನೀಡಿ ಬೇಸತ್ತು ಕೊನೆಗೆ ಪಾಲಿಕೆ ಅಧಿಕಾರಿಗಳ ಮೂಲಕ ಮೊದಲಿದ್ದ ಒಳಚರಂಡಿ ಪತ್ತೆ ಮಾಡಲಾಗಿದೆ. ಆದಷ್ಟು ಶೀಘ್ರ ಈ ಒಳಚರಂಡಿ ಸುಧಾರಿಸಿ ಈ ಮೂಲಕ ಕಲುಷಿತ ನೀರು ಹೊರಗೆ ಹಾಕಿದರೆ ಮಾತ್ರ ಸಾಧನಕೇರಿ ಕೆರೆ, ಉದ್ಯಾನವನ ಉಳಿಯಲಿದೆ.
>
> 
>
> • **ವೆಂಕಟೇಶ ತೆಲಗಾರ**
> ಹುಬ್ಳೀಕರ ಪ್ಲಾಟ್ ಹಿರಿಯರು

ಪ್ರತ್ಯೇಕ ಪಾಲಿಕೆ: ಬಿಜೆಪಿ ಯೂ ಟರ್ನ್!

ಪ್ರತ್ಯೇಕ ಬೇಡ, ಬೃಹತ್ ಪಾಲಿಕೆಗೆ ನಿರ್ಣಯ ಬಗ್ಗೆ ಚರ್ಚೆಯೇ ಆಗಿಲ್ಲ | ಧಾರವಾಡ ಜನರಿಗೆ ಬಿಜೆಪಿಯಿಂದ ಮೋಸ | ಸಾಮಾನ್ಯ ಸಭೆಯಲ್ಲಿ ಚರ್ಚಿಸದೇ ಓಡಿ ಹೋದ ಬಿಜೆಪಿ ಸದಸ್ಯರು

• **ಕನ್ನಡಪ್ರಭ ವಾರ್ತೆ** ಧಾರವಾಡ

ಇತ್ತೀಚೆಗೆ ನಡೆದ ಮಹಾನಗರ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಪ್ರತ್ಯೇಕ ಪಾಲಿಕೆ ಬೇಡ, ಬೃಹತ್ ಪಾಲಿಕೆಯಾಗಿ ರಚಿಸಲು ಯಾವುದೇ ಚರ್ಚೆ ಇಲ್ಲದೇ ವಿಪಕ್ಷಗಳ ವಿರೋಧ ಮಧ್ಯೆ ನಿರ್ಣಯ ಕೈಗೊಳ್ಳಲಾಗಿದೆ. ಸಭಾನಾಯಕರು ಸೇರಿದಂತೆ ಬಿಜೆಪಿ ಸದಸ್ಯರು ಚರ್ಚಿಸದೇ ಓಡಿ ಹೋಗಿದ್ದಾರೆ ಎಂದು ಪಾಲಿಕೆ ವಿಪಕ್ಷ ನಾಯಕ ಇಮ್ರಾನ ಯಲಿಗಾರ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಬೇಕೆಂದು ಸ್ವತಃ ಇದೇ ಬಿಜೆಪಿ ಸದಸ್ಯರು ನಿರ್ಣಯ ಕೈಗೊಂಡು ಇದೀಗ ಹೆಚ್ಚಿನ ಅನುದಾನ ಬರಲಿದೆ ಎಂದು ಧಾರವಾಡ ಜನತೆಯ ಮೂಗಿಗೆ ತುಪ್ಪ ಸವರುತ್ತಿದ್ದಾರೆ. ಪಾಲಿಕೆಯ ಎಲ್ಲ ಅಧಿಕಾರಿ ವರ್ಗ ಹುಬ್ಬಳ್ಳಿಯಲ್ಲಿದ್ದು ಧಾರವಾಡ ಜನತೆಗೆ ಜನನ-ಮರಣ, ಕಟ್ಟಡ ಪರವಾನಗಿ, ಸಿಸಿ ಅಂತಹ ಕೆಲಸ-ಕಾರ್ಯಗಳು ತುಂಬ ವಿಳಂಬ ಆಗಲಿವೆ. ಈ ಹಿನ್ನೆಲೆಯಲ್ಲಿ ಪ್ರತ್ಯೇಕ ಪಾಲಿಕೆ ಮಾಡಲು ಕಾಂಗ್ರೆಸ್ ಸರ್ಕಾರ ಸದನದಲ್ಲಿ ಒಪ್ಪಿತ್ತು. ಇದೀಗ ಏಕಾಏಕಿ ಪ್ರತ್ಯೇಕ ಪಾಲಿಕೆ ಬೇಡ, ಬೃಹತ್ ಪಾಲಿಕೆಯನ್ನಾಗಿ ಮಾಡೋಣ ಎಂದು ಜನರನ್ನು ದಾರಿ ತಪ್ಪಿಸುತ್ತಿರುವುದು ಏತಕ್ಕೆ ಎಂದು ಇಮ್ರಾನ್ ಪ್ರಶ್ನಿಸಿದರು.

ಪಾಲಿಕೆ ಕಾಂಗ್ರೆಸ್ ಸದಸ್ಯರಾದ ರಾಜು ಕಮತಿ, ಕವಿತಾ ಕಬ್ಬೇರ ಮಾತನಾಡಿ, ಸಾಮಾನ್ಯ ಸಭೆಯಲ್ಲಿ ಬಿಜೆಪಿ ಸದಸ್ಯರು ಚರ್ಚಿಸದೇ ಓಡಿ ಹೋಗಿದ್ದು ಏಕೆ? ಪ್ರತ್ಯೇಕ ಪಾಲಿಕೆ ಕ್ರೆಡಿಟ್ ಕಾಂಗ್ರೆಸ್‌ಗೆ ಸಿಗಲಿದೆ ಎಂದು ಬಿಜೆಪಿ ಮುಖಂಡರು ಧಾರವಾಡ ಜನತೆಗೆ ಮೋಸ ಮಾಡುತ್ತಿದ್ದಾರೆ. ಬೃಹತ್ ಪಾಲಿಕೆಯಾಗಿ ರಚಿಸಲು ಅವಳಿ ನಗರಕ್ಕೆ ಇನ್ನೂ ಅರ್ಹತೆ ಬಂದಿಲ್ಲ. ಬಿಜೆಪಿ ಮುಖಂಡರು ಧಾರವಾಡ ಜನತೆ ಹಾಗೂ ಊರನ್ನು ಬರೀ ಮನೆಯ ಹಿತ್ತಲಾಗಿ ಬಳಸಿಕೊಳ್ಳುತ್ತಿದ್ದಾರೆ. ಪ್ರತ್ಯೇಕ ಪಾಲಿಕೆ ವಿಚಾರದಲ್ಲಂತೂ ಬಿಜೆಪಿ ಯೂ ಟರ್ನ್ ಹೊಡೆದಿದ್ದು, ಜನರು ಅವರಿಗೆ ತಕ್ಕ ಪಾಠ ಕಲಿಸಬೇಕು. ನಾವು ಮಾತ್ರ ಪ್ರತ್ಯೇಕ ಪಾಲಿಕೆ ಆಗುವ ವರೆಗೂ ಹೋರಾಟ ನಿಶ್ಚಿತ ಎಂದು ಸ್ಪಷ್ಟಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಪಾಲಿಕೆ ಸದಸ್ಯರಾದ ದೀಪಾ ನೀರಲಕಟ್ಟಿ, ಶಂಬು ಸಾಲಿಮನಿ, ಮಂಜುನಾಥ ನೀರಲಕಟ್ಟಿ, ತುಳಜಪ್ಪ ಪೂಜಾರ ಇದ್ದರು.



- ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆ ಬೇಕೆಂದು ಸ್ವತಃ ಇದೇ ಬಿಜೆಪಿ ಸದಸ್ಯರು ನಿರ್ಣಯ ಕೈಗೊಂಡು ಇದೀಗ ಹೆಚ್ಚಿನ ಅನುದಾನ ಬರಲಿದೆ ಎಂದು ಧಾರವಾಡ ಜನತೆಯ ಮೂಗಿಗೆ ತುಪ್ಪ ಸವರುತ್ತಿದ್ದಾರೆ.
- ಪ್ರತ್ಯೇಕ ಪಾಲಿಕೆ ಮಾಡಲು ಕಾಂಗ್ರೆಸ್ ಸರ್ಕಾರ ಸದನದಲ್ಲಿ ಒಪ್ಪಿತ್ತು. ಇದೀಗ ಏಕಾಏಕಿ ಪ್ರತ್ಯೇಕ ಪಾಲಿಕೆ ಬೇಡ, ಬೃಹತ್ ಪಾಲಿಕೆಯನ್ನಾಗಿ ಮಾಡೋಣ ಎಂದು ಜನರನ್ನು ದಾರಿ ತಪ್ಪಿಸುತ್ತಿರುವುದು ಏತಕ್ಕೆ
- ಪ್ರತ್ಯೇಕ ಪಾಲಿಕೆ ಕ್ರೆಡಿಟ್ ಕಾಂಗ್ರೆಸ್‌ಗೆ ಸಿಗಲಿದೆ ಎಂದು ಬಿಜೆಪಿ ಮುಖಂಡರು ಧಾರವಾಡ ಜನತೆಗೆ ಮೋಸ ಮಾಡುತ್ತಿದ್ದಾರೆ.

> ಯಾವುದೇ ಚರ್ಚೆ ಇಲ್ಲದೇ ಪ್ರತ್ಯೇಕ ಪಾಲಿಕೆ ಬೇಡ ಎನ್ನುವ ನಿರ್ಣಯಕ್ಕೆ ನಾವು ವಿರೋಧ ವ್ಯಕ್ತಪಡಿಸಿದ್ದು, ಧಾರವಾಡ ಜನತೆ, ಸಂಘ-ಸಂಸ್ಥೆಗಳು, ಪಕ್ಷದ ಮುಖಂಡರೊಂದಿಗೆ ಚರ್ಚಿಸಿ ಹೋರಾಟದ ಮೂಲಕ ಧಾರವಾಡಕ್ಕೆ ಪ್ರತ್ಯೇಕ ಪಾಲಿಕೆಯ ಭಾಗ್ಯ ಒದಗಿಸಿ, ಇಲ್ಲಿಯ ಜನರಿಗೆ ಅನುಕೂಲ ಮಾಡುವುದು ನಮ್ಮ ಗುರಿ.
>
> • **ಇಮ್ರಾನ್ ಯಲಿಗಾರ**
> ಪಾಲಿಕೆ ವಿಪಕ್ಷ ನಾಯಕ

> ಸಾಮಾನ್ಯ ಸಭೆಯಲ್ಲಿ ಬಿಜೆಪಿ ಸದಸ್ಯರು ಚರ್ಚಿಸದೇ ಓಡಿ ಹೋಗಿದ್ದು ಏಕೆ?
>
> • **ಕವಿತಾ ಕಬ್ಬೇರ** ಪಾಲಿಕೆ ಸದಸ್ಯೆ

ನಿಸ್ವಾರ್ಥ ಸೇವೆ ಮಾಡಿದ ವಾಮನರಾವ್ ದಂಪತಿ

• **ಕನ್ನಡಪ್ರಭ ವಾರ್ತೆ** ಧಾರವಾಡ

ಜಮಖಂಡಿ ನಿವಾಸಿಗಳಾಗಿದ್ದ ವಾಮನರಾವ್ ಹಾಗೂ ಪದ್ಮಾವತಿ ದಂಪತಿ ನಿಸ್ವಾರ್ಥ ಭಾವದಿಂದ ದೇಶಸೇವೆ ಮಾಡಿದವರು ಎಂದು ಹೋರಾಟಗಾರ ತಾತಾಸಾಹೇಬ್ ಬಾಂಗಿ ಹೇಳಿದರು.

ಕರ್ನಾಟಕ ವಿದ್ಯಾವರ್ಧಕ ಸಂಘವು ಆಯೋಜಿಸಿದ್ದ ದತ್ತಿಯಲ್ಲಿ ಮಾತನಾಡಿ, ದೇಶಗತಿ ಮನೆತನಕ್ಕೆ ಸಂಬಧಪಟ್ಟ ಈ ದಂಪತಿ, ನೂರಾರು ಎಕರೆ ಜಮೀನನ್ನು ಹೊಂದಿದವರು. ಇಬ್ಬರೂ ಸ್ವಾತಂತ್ರ್ಯ ಹೋರಾಟಗಾರರು. ಪದ್ಮಾವತಿ ಗರ್ಭಿಣಿಯಾಗಿದ್ದಾಗಲೂ ಸ್ವಾತಂತ್ರ್ಯ ಹೋರಾಟ ಬಿಡಲಿಲ್ಲ. ಅಲ್ಲದೇ ಮಗ ಹುಟ್ಟಿದಾಗಲೂ ಕೂಡ ಒಂದು ಕೈಯಲ್ಲಿ ಮಗು ಇನ್ನೊಂದು ಕೈಯಲ್ಲಿ ಧ್ವಜ ಹಿಡಿದು ಹೋರಾಟ ಮಾಡಿದ ಮಹನೀಯರು ಎಂದ ಅವರು, ಹಾಗೇಯೆ ವಾಮನರಾವಕೂಡವೇಷಮರೆಸಿಕೊಂಡು, ಭೂಗತರಾಗಿದ್ದುಕೊಂಡು ಬ್ರಿಟಿಷರ ವಿರುದ್ಧ ದಂಗೆಯೆದ್ದವರು ಎಂದರು.

ಕೆ.ಬಿ. ಪಾಟೀಲ ಕುಲಕರ್ಣಿ, ಡಾ. ಸುಭಾಸ ಹಿರೇಮಠ ಹಾಗೂ ಅಧ್ಯಕ್ಷತೆ ವಹಿಸಿದ್ದ ಸಮಾಜ ಸೇವಕರಾದ ಪ್ರೇಮಾ ಪಾಟೀಲ ಮಾತನಾಡಿದರು. ಇದೇ ವೇಳೆ ಪ್ರೊ. ಆರ್.ಎಂ. ಷಡಕ್ಷರಯ್ಯ ದಂಪತಿ ಸನ್ಮಾನಿಸಲಾಯಿತು. ಮನೋಜ ಪಾಟೀಲ ಸ್ವಾಗತಿಸಿದರು. ಡಾ. ಜಿನದತ್ತ ಹಡಗಲಿ ನಿರೂಪಿಸಿದರು, ಪ್ರೊ. ಧನವಂತ ಹಾಜವಗೋಳ ವಂದಿಸಿದರು. ಸರೋಜಾ ಕುಲಕರ್ಣಿ ಇದ್ದರು.

ಕೆಎಂಸಿಆರ್‌ಐನ ಅಭಿವೃದ್ಧಿ ಕಾಮಗಾರಿಗಳ ಪಟ್ಟಿ ನೀಡಿ



ಹುಬ್ಬಳ್ಳಿ ಕೆಎಂಸಿಆರ್‌ಐನಲ್ಲಿ ₹2 ಕೋಟಿಗೂ ಹೆಚ್ಚು ಮೊತ್ತದ ವೈಟ್ ಟ್ಯಾಪಿಂಗ್ ರಸ್ತೆ ಕಾಮಗಾರಿಗೆ ಶಾಸಕ ಮಹೇಶ ಟೆಂಗಿನಕಾಯಿ ಭೂಮಿಪೂಜೆ ನೆರವೇರಿಸಿದರು.

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಕೆಎಂಸಿಆರ್‌ಐನ ಆವರಣದಲ್ಲಿ ಅಗತ್ಯ ಮೂಲಭೂತ ಸೌಲಭ್ಯಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಇನ್ನೂ ಬೇಕಾದ ಅಭಿವೃದ್ಧಿ ಕಾರ್ಯ ಕೈಗೊಳ್ಳಲು ಬದ್ಧನಿದ್ದು ಇಲ್ಲಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ಪಟ್ಟಿ ನೀಡಿದಲ್ಲಿ ಪೂರ್ಣಗೊಳಿಸಲು ಶ್ರಮಿಸುತ್ತೇನೆಂದು ಶಾಸಕ ಮಹೇಶ ಟೆಂಗಿನಕಾಯಿ ಹೇಳಿದರು. ಮಂಗಳವಾರ ಇಲ್ಲಿನ ಕೆಎಂಸಿಆರ್‌ಐನಲ್ಲಿ ₹ 2 ಕೋಟಿಗೂ ಹೆಚ್ಚು ಮೊತ್ತದ ವೈಟ್ ಟ್ಯಾಪಿಂಗ್ ರಸ್ತೆ ಕಾಮಗಾರಿಗೆ ಭೂಮಿಪೂಜೆ ನೆರವೇರಿಸಿ ಮಾತನಾಡಿದರು. ಕೆಎಂಸಿಆರ್‌ಐ ಘಟಕದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡುತ್ತಿದ್ದು ವೈದ್ಯರು ರೋಗಿಗಳೊಂದಿಗೆ ಉತ್ತಮ ಚಿಕಿತ್ಸೆ ನೀಡುತ್ತಿದ್ದಾರೆ. ವಿಶಾಲವಾದ ಈ ಕ್ಷೇತ್ರದಲ್ಲಿ ಸರಿಯಾದ ರಸ್ತೆ, ನೀರು, ಚರಂಡಿ ಸೇರಿದಂತೆ ಮೂಲಭೂತ ಸೌಕರ್ಯ ಒದಗಿಸಲು ಬದ್ಧನಿದ್ದೇನೆ ಎಂದರು. ಕೇಂದ್ರ ಸರ್ಕಾರದಿಂದ ಇಲ್ಲಿನ ಅಭಿವೃದ್ಧಿಗೆ ಸಾಕಷ್ಟು ನೆರವು ನೀಡಿದ್ದು, ಈಗ ರಾಜ್ಯ ಸರ್ಕಾರವು ನೆರವು ನೀಡುತ್ತಿದೆ. ಇಲ್ಲಿ ಏಳು ಜಿಲ್ಲೆಗಳಿಂದ ಸಾವಿರಾರು ರೋಗಿಗಳು ಚಿಕಿತ್ಸೆಗಾಗಿ ಬರುತ್ತಾರೆ. ಉತ್ತರ ಕರ್ನಾಟಕ ಭಾಗದಲ್ಲಿಯೇ ಬಹುದೊಡ್ಡದಾದ ಆಸ್ಪತ್ರೆ ಇದಾಗಿದ್ದು, ಅದಕ್ಕೆ ಅನುಗುಣವಾಗಿ ಎಲ್ಲರೂ ತಮ್ಮ ಕರ್ತವ್ಯ ನಿಭಾಯಿಸುವುದು ಮುಖ್ಯ. ಜತೆಗೆ ಸಂಸ್ಥೆಗೆ ಒಳ್ಳೆಯ ಹೆಸರು ತರುವುದು ಅಷ್ಟೇ ಮುಖ್ಯ ಎಂದರು. ಈ ವೇಳೆ ಕೆಎಂಸಿಆರ್‌ಐನ ಅಧೀಕ್ಷಕ ಡಾ. ಈಶ್ವರ ಹೊಸಮನಿ, ವೈದ್ಯಕೀಯ ಅಧೀಕ್ಷಕ ಡಾ. ಈಶ್ವರ ಹಸಬಿ, ಬಿಜೆಪಿ ಮುಖಂಡ ಲಿಂಗರಾಜ ಪಾಟೀಲ ಸೇರಿದಂತೆ ಹಲವರಿದ್ದರು.

ಶಿಕ್ಷಣ ಪದ್ಧತಿ... ಕೇಶವ ವಿದ್ಯಾ ಕೇಂದ್ರದ 2ನೇ ಮಹಡಿ ಲೋಕಾರ್ಪಣೆ | ನಾವು ಕಪ್ಪು ಚರ್ಮದ ಬ್ರಿಟಿಷರಂತೆ ವರ್ತಿಸುತ್ತಿದ್ದೇವೆ

ಲಾರ್ಡ್ ಮೆಕಾಲೆ ಶಿಕ್ಷಣ ಪದ್ಧತಿ ಕೈಬಿಡಿ: ಮಂಗೇಶ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ


ಲಾರ್ಡ್ ಮೆಕಾಲೆ ಶಿಕ್ಷಣ ಪದ್ಧತಿಯಿಂದ ದೇಶದ ಜನತೆ ನಲುಗಿ ಹೋಗಿದ್ದಾರೆ. ಇಂದಿಗೂ ಬ್ರಿಟಿಷ್ ಶಿಕ್ಷಣ ಪದ್ಧತಿ ಅನುಸರಿಸುತ್ತಿರುವ ನಾವು ಕಪ್ಪು ಚರ್ಮದ ಬ್ರಿಟಿಷರಂತೆ ವರ್ತಿಸುತ್ತಿದ್ದೇವೆ. ಈ ಪದ್ಧತಿ ಕೈಬಿಟ್ಟು ಭಾರತದ ಪರಂಪರಾಗತ ಶಿಕ್ಷಣ ಪದ್ಧತಿ ಅಳವಡಿಸಿಕೊಳ್ಳಬೇಕಿದೆ ಎಂದು ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಹೇಳಿದರು.

ಮಂಗಳವಾರ ಇಲ್ಲಿನ ಗೋಕುಲ ರಸ್ತೆಯ ರೇಣುಕಾ ನಗರದಲ್ಲಿನ ಭಾರತೀಯ ಶಿಕ್ಷಣ ಪ್ರಸಾರ ಸಮಿತಿ ಸಂಚಾಲಿತ ಕೇಶವ ವಿದ್ಯಾ ಕೇಂದ್ರದ 2ನೇ ಮಹಡಿ ಲೋಕಾರ್ಪಣೆಗೊಳಿಸಿ ಮಾತನಾಡಿದರು.

1835ರಲ್ಲಿ ಲಾರ್ಡ್ ಮೆಕಾಲೆ ಭಾರತೀಯರನ್ನು ಒಡೆದಾಳುವ ಉದ್ದೇಶದಿಂದಲೇ ನೂತನ ಶಿಕ್ಷಣ ಪದ್ಧತಿ ಜಾರಿಗೆ ತಂದ. ಇದಾದ ಕೆಲವೇ ವರ್ಷಗಳಲ್ಲಿ ದಿನಕ್ಕೆ ಮೂರು ಹೊತ್ತು ಪೂಜೆ ಮಾಡುತ್ತಿದ್ದ ಹಿಂದೂಗಳು ನಾಸ್ತಿಕರಾಗಿದ್ದರು. ನೂತನ ಶಿಕ್ಷಣ ಪದ್ಧತಿಯ ಪರಿಣಾಮವಾಗಿ 1885ರಲ್ಲಿ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪನೆ ಆಗುವುದರೊಂದಿಗೆ ಮೆಕಾಲೆಯ ಉದ್ದೇಶವೂ ಈಡೇರಿತ್ತು. ಇಷ್ಟೆಲ್ಲ ಆದರೂ ನಾವು ಇಂದಿಗೂ ಅದೇ ಶಿಕ್ಷಣ ಪದ್ಧತಿ ಪಾಲಿಸುತ್ತಿದ್ದೇವೆ. ಇದನ್ನು ತಪ್ಪಿಸಲು ಮತ್ತು ಭಾರತದ ಪರಂಪರಾಗತ ಶಿಕ್ಷಣ ಪದ್ಧತಿ ಜಾರಿಗೊಳಿಸುವ ಉದ್ದೇಶದಿಂದಲೇ ಭಾರತೀಯ ಶಿಕ್ಷಣ ಪ್ರಸಾರ ಸಮಿತಿ ಮತ್ತು ವಿದ್ಯಾ ಭಾರತಿ ಪ್ರತಿಷ್ಠಾನಗಳು ದೇಶಾದ್ಯಂತ ಶ್ರಮಿಸುತ್ತಿವೆ ಎಂದರು.

ಸ್ವಾತಂತ್ರ್ಯ ಹೋರಾಟಕ್ಕಾಗಿ ಸ್ಥಾಪನೆಯಾಗಿದೆ ಎಂಬ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಧ್ಯೇಯವೇ ಬೇರೆಯಾಗಿತ್ತು. ಈ ಸಂಘಟನೆಯ ಅಜೆಂಡಾ, ದಾಖಲೆ ಗಮನಿಸಿದಲ್ಲಿ ಇದು ಸ್ವಾತಂತ್ರ್ಯ ಬಯಸಿದ್ದೇ ಇಲ್ಲ. ನಮಗೆ ನೌಕರಿ ಕೊಡಿ ಎಂದು ಬ್ರಿಟಿಷರ ಬಳಿ ಭಿಕ್ಷೆ ಬೇಡಲು ಹುಟ್ಟಿಕೊಂಡ ಸಂಘಟನೆಯಾಗಿತ್ತು. ಈ ಸಂಘಟನೆಗೆ ಲೋಕಮಾನ್ಯ ಬಾಲಗಂಗಾಧರ ತಿಲಕ್ ಸೇರಿಕೊಂಡ ಮೇಲೆ ಸ್ವಾತಂತ್ರ್ಯ ಹೋರಾಟ ಆರಂಭಿಸಿತ್ತು ಎಂದು ವಿವರಿಸಿದರು. ಗದುಗಿನ ಶಿವಾನಂದ ಬೃಹನ್ಮಠದ ಜ. ಶಿವಾನಂದ ಶ್ರೀ ಆಶೀರ್ವಚನ ನೀಡಿ, ನೂರಾರು ಯುದ್ಧ, ಸಾವಿರಾರು ರೀತಿಯ ಆಕ್ರಮಣ ಗಳು ಈ ದೇಶದ ಮೇಲೆ ನಡೆದಿರಬಹುದು. ಆದರೆ, ಸಾವಿರಾರು ವರ್ಷದಿಂದಲೂ ಈ ವರೆಗೆ ಒಂದೇ ಒಂದು ಜ್ಞಾನ ಕ್ಷೇತ್ರವನ್ನು ಕೂಡ ಭಾರತ ಕಳೆದುಕೊಂಡಿಲ್ಲ. ಈಗಲೂ ಕೂಡ ಜಗತ್ತು ಭಾರತಕ್ಕೆ ಹೆದರುತ್ತೆ ಎಂದರೆ ಸಾಮರ್ಥ್ಯ ನೋಡಿಯಲ್ಲ, ಬುದ್ಧಿಗಾಗಿ ಎಂಬುದು ಸತ್ಯ ಎಂದರು.

ಕೇಶವ ವಿದ್ಯಾ ಕೇಂದ್ರದ ಆಡಳಿತಾಧಿಕಾರಿ ಶ್ರೀಧರ ಜೋಶಿ ಮಾತನಾಡಿದರು. ಇದೇ ವೇಳೆ ಕೇಶವ ವಿದ್ಯಾ ಕೇಂದ್ರದ 2ನೇ ಮಹಡಿ ನಿರ್ಮಾಣಕ್ಕೆ ಸಹಾಯ ಮಾಡಿದ ದಾನಿಗಳನ್ನು ಸನ್ಮಾನಿಸಲಾಯಿತು. ವಿದ್ಯಾ ಕೇಂದ್ರದ ಅಧ್ಯಕ್ಷ ಶಿವಲಿಂಗಯ್ಯ ಶಿವಯೋಗಿಮಠ, ಕಾರ್ಯದರ್ಶಿ ದತ್ತಮೂರ್ತಿ ಕುಲಕರ್ಣಿ, ಮುಖ್ಯೋಪಾಧ್ಯಾಯಿನಿ ಶರಾವತಿ ಕುಲಕರ್ಣಿ, ಶಾಸಕ ಮಹೇಶ ಟೆಂಗಿನಕಾಯಿ, ವಿಪ ಸದಸ್ಯ ಪ್ರದೀಪ ಶೆಟ್ಟರ, ಸ್ವರ್ಣ ಸಮೂಹ ಸಂಸ್ಥೆಗಳ ವ್ಯವಸ್ಥಾಪಕ ನಿರ್ದೇಶಕ ಡಾ. ವಿ.ಎಸ್.ವಿ. ಪ್ರಸಾದ, ಮಜೇಥಿಯಾ ಫೌಂಡೇಶನ್ ಸಂಸ್ಥಾಪಕ ಜಿತೇಂದ್ರ ಮಜೇಥಿಯಾ, ಗೌತಮ ಬಾಫನಾ ಸೇರಿದಂತೆ ಹಲವರಿದ್ದರು.



ಕೇಶವ ವಿದ್ಯಾ ಕೇಂದ್ರದ 2ನೇ ಮಹಡಿ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಆರ್‌ಎಸ್‌ಎಸ್ ಅಖಿಲ ಭಾರತೀಯ ವ್ಯವಸ್ಥಾ ಪ್ರಮುಖ ಮಂಗೇಶ ಭೇಂಡೆ ಮಾತನಾಡಿದರು.

ಚಿತ್ರದುರ್ಗದಲ್ಲಿ ಮೇ 9ರಂದು ನಡೆಯುವ ಬಿಎಸ್‌ವೈ ಅಭಿಮಾನೋತ್ಸವಕ್ಕೆ ಧಾರವಾಡ ಜಿಲ್ಲೆಯಿಂದಲೂ ಸಾವಿರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಕಾರ್ಯಕ್ರಮಕ್ಕೆ ತೆರಳಲಿದ್ದಾರೆ. ಈ ಕುರಿತು ಬುಧವಾರ ಜಿಲ್ಲಾ ಮುಖಂಡರ ಹಾಗೂ ಕಾರ್ಯಕರ್ತರ ಸಭೆ ಕರೆಯಲಾಗಿದೆ.

• **ಮಹೇಶ ಟೆಂಗಿನಕಾಯಿ** ಶಾಸಕ

ಸುದ್ದಿ ಸಿಂಚನ

ಚಿತ್ರದುರ್ಗದ ಬಿಎಸ್‌ವೈ ಅಭಿಮಾನೋತ್ಸವ ಸಾವಿರಾರು ಜನ: ಶಾಸಕ

ಹುಬ್ಬಳ್ಳಿ: ಬಿ.ಎಸ್. ಯಡಿಯೂರಪ್ಪ ಅವರು ರಾಜಕೀಯ ಕ್ಷೇತ್ರಕ್ಕೆ ಆಗಮಿಸಿ ಐದ ದಶಕಗಳಾದ ಹಿನ್ನಲೆಯಲ್ಲಿ ಚಿತ್ರದುರ್ಗದಲ್ಲಿ ಮೇ 9ರಂದು ಹಮ್ಮಿಕೊಂಡಿರುವ ಬಿಎಸ್‌ವೈ ಅಭಿಮಾನೋತ್ಸವದಲ್ಲಿ ಹುಬ್ಬಳ್ಳಿಯ ಸಾವಿರಾರು ಜನ ಕಾರ್ಯಕರ್ತರು ಭಾಗವಹಿಸಲಿದ್ದಾರೆ ಎಂದು ಶಾಸಕ ಮಹೇಶ ಟೆಂಗಿನಕಾಯಿ ಹೇಳಿದರು. ಸುದ್ದಿಗೋಷ್ಠಿಯಲ್ಲಿ ಈ ವಿವರ ನೀಡಿದ ಅವರು, ಸಚಿವ ಅಮಿತ್ ಶಾ ಸೇರಿದಂತೆ ಹಲವು ಕೇಂದ್ರ ಸಚಿವರು, 500ಕ್ಕೂ ಹೆಚ್ಚು ಮಠಾಧೀಶರು, ಪಕ್ಷಾತೀತವಾಗಿ ಹಲವು ನಾಯಕರು ಪಾಲ್ಗೊಳ್ಳಲಿದ್ದಾರೆ. ಜಿಲ್ಲೆಯಿಂದಲೂ ಸಾವಿರಾರು ಸಂಖ್ಯೆಯಲ್ಲಿ ಕಾರ್ಯಕರ್ತರು ಕಾರ್ಯಕ್ರಮಕ್ಕೆ ತೆರಳಲಿದ್ದಾರೆ.



■ ಬಿಎಸ್‌ವೈ ರಾಜಕೀಯಕ್ಕೆ ಕ್ಷೇತ್ರಕ್ಕೆ ಆಗಮಿಸಿ ಐದು ದಶಕ ಕಳೆದಿವೆ

ಈ ಕುರಿತು ಬುಧವಾರ ಜಿಲ್ಲಾ ಮುಖಂಡರ ಹಾಗೂ ಕಾರ್ಯಕರ್ತರ ಸಭೆ ಕರೆಯಲಾಗಿದೆ ಎಂದರು.
ರಾಜ್ಯಾದ್ಯಂತ ಸೈಕಲ್‌ನಲ್ಲಿ ಸಂಚರಿಸಿ ಪಕ್ಷ ಸಂಘಟಿಸಿದ ಫಲವಾಗಿ ರಾಜ್ಯದಲ್ಲಿ ಪಕ್ಷವು ಅಧಿಕಾರಕ್ಕೆ ಬಂದಿತ್ತು. ದಕ್ಷಿಣ ಭಾರತದಲ್ಲಿ ಬಿಜೆಪಿ ಬೆಳೆಯಲು ಬಿಎಸ್‌ವೈ ಪ್ರಮುಖ ಪಾತ್ರ ವಹಿಸಿದ್ದಾರೆ ಎಂದರು. ಬಿಎಸ್‌ವೈ ಮುಖ್ಯಮಂತ್ರಿ ಯಾಗಿದ್ದ ವೇಳೆ ರೈತರು, ಬಡವರು, ಮಹಿಳೆಯರು ಸೇರಿದಂತೆ ಎಲ್ಲ ವರ್ಗದ ವರಿಗೆ ಯೋಜನೆ ರೂಪಿಸಿ ಜನನಾಯಕರಾಗಿ ಗುರುತಿಸಿ ಕೊಂಡಿದ್ದಾರೆ. ಉತ್ತರ ಕರ್ನಾಟಕ ಅಭಿವೃದ್ಧಿಯಲ್ಲಿ ಅವರ ಕೊಡುಗೆ ಅಪಾರವಾಗಿದ್ದು, ಅವರೊಬ್ಬ ಪಕ್ಷಾತೀತ ನಾಯಕರಾಗಿ ಹೊರಹೊಮ್ಮಿದ್ದಾರೆ ಎಂದರು. ಜಿಲ್ಲಾಧ್ಯಕ್ಷ ತಿಪ್ಪಣ್ಣ ಮಜ್ಜಗಿ, ವಿಪ ಸದಸ್ಯ ಪ್ರದೀಪ ಶೆಟ್ಟರ ಮಾತನಾಡಿ ದರು. ಸುದ್ದಿಗೋಷ್ಠಿಯಲ್ಲಿ ಲಿಂಗರಾಜ ಅಂಗಡಿ, ಜಯತೀರ್ಥ ಕಟ್ಟಿ, ರಾಜು ಕೋರ್ಯಾಣಮಠ ಸೇರಿದಂತೆ ಹಲವರಿದ್ದರು.

ಏರ್‌ಪೋರ್ಟ್ ಮೇಲ್ದರ್ಜೆ ಕಾಮಗಾರಿ ವಿಳಂಬ

ಜನವರಿಗೆ ಮುಗಿಯಬೇಕಿದ್ದ ಕಾಮಗಾರಿ ಜೂನ್‌ಗೆ ವಿಸ್ತರಣೆ | ಜೂನ್ ಅಂತ್ಯಕ್ಕೆ ಪೂರ್ಣಗೊಳ್ಳದಿದ್ದರೆ ಮತ್ತೆ ಅವಧಿ ವಿಸ್ತರಣೆ

• **ಶಿವಾನಂದ ಗೊಂಬಿ**
ಕನ್ನಡಪ್ರಭ ವಾರ್ತೆ ಹುಬ್ಬಳ್ಳಿ

ಅಂತಾರಾಷ್ಟ್ರೀಯ ಗುಣಮಟ್ಟದ ಸೌಲಭ್ಯದೊಂದಿಗೆ ಇಲ್ಲಿನ ವಿಮಾನ ನಿಲ್ದಾಣ ಉನ್ನತೀಕರಿಸುವ ಕಾಮಗಾರಿ ವಿಳಂಬವಾಗಿದ್ದು, ಟೆಂಡರ್ ಅವಧಿ ವಿಸ್ತರಿಸಲಾಗಿದೆ. ಕಾಮಗಾರಿಯ ವಿಳಂಬ ನೋಡಿದರೆ ಮತ್ತೊಮ್ಮೆ ಕಾಲಮಿತಿ ವಿಸ್ತರಿಸುವ ಸಾಧ್ಯತೆ ದಟ್ಟವಾಗಿವೆ.

ಹುಬ್ಬಳ್ಳಿ ವಿಮಾನ ನಿಲ್ದಾಣ ಉನ್ನತೀಕರಿಸಬೇಕು. ಅಂತಾರಾಷ್ಟ್ರೀಯ ವಿಮಾನಗಳು ಹಾರಾಟ ನಡೆಸದಿದ್ದರೂ ಸೌಲಭ್ಯಗಳು ಅತ್ಯಾಧುನಿಕವಾಗಿ ರಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರ ಉನ್ನತೀಕರಿಸುವ ಕಾಮಗಾರಿಗೆ 2024ರ ಮಾರ್ಚ್‌ನಲ್ಲಿ ಚಾಲನೆ ನೀಡಿ 2026ರ ಜನವರಿಯೊಳಗೆ ಕಾಮಗಾರಿ ಪೂರ್ಣಗೊಳಿಸಲು ಕಾಲಮಿತಿ ನಿಗದಿಪಡಿಸಲಾಗಿತ್ತು.

ಆದರೆ, ಕಾಮಗಾರಿ ಪೂರ್ಣಗೊಳ್ಳದ ಹಿನ್ನಲೆ ಜೂನ್ 30ರ ವರೆಗೆ ವಿಸ್ತರಿಸಲಾಗಿದೆ. ಸದ್ಯ ಶೇ.70ರಷ್ಟು ಕಾಮಗಾರಿ ಮುಗಿಗಿದ್ದು, ಉಳಿದ ಕಾಮಗಾರಿ ಜೂನ್ ಅಂತ್ಯದೊಳಗೆ ಮುಗಿಯುವ ಯಾವ ಲಕ್ಷಣಗಳು ಗೋಚರಿಸುತ್ತಿಲ್ಲ. ಆದರೆ, ಅಧಿಕಾರಿಗಳುಮಾತ್ರಕಾಮಗಾರಿಮುಗಿಸುತ್ತೇವೆಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

₹ 320 ಕೋಟಿ ವೆಚ್ಚ: ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ಈ ಕಾಮಗಾರಿ ₹ 320 ಕೋಟಿ ವೆಚ್ಚದಲ್ಲಿ ನಡೆಯುತ್ತಿದೆ. ಮಹಾರಾಷ್ಟ್ರದ ನಾಸಿಕ್ ಮೂಲದ ಹರ್ಷ ಕನ್‌ಸ್ಟ್ರಕ್ಷನ್ ಕಂಪನಿ ಕಾಮಗಾರಿಯ ಗುತ್ತಿಗೆ ಪಡೆದಿದ್ದು ಲಾಜಿಸ್ಟಿಕ್ ಮತ್ತು ಕಾರ್ಯಗತಗೊಳಿಸುವ ಸವಾಲು ಸೇರಿದಂತೆ ಅನೇಕ ಅಂಶಗಳಿಂದಾಗಿ ಕೆಲಸ ಕೊಂಚ ವಿಳಂಬವಾಗಿದೆ. ಈಗ ಒಂದು ಹಂತಕ್ಕೆ ಬಂದಿದ್ದು ಶೀಘ್ರದಲ್ಲೇ ಪೂರ್ಣಗೊಳ್ಳಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಹೊಸ ಟರ್ಮಿನಲ್ ಪೂರ್ಣಗೊಂಡ ನಂತರ ಪ್ರಯಾಣಿಕರ ನಿರ್ವಹಣಾ ಸಾಮರ್ಥ್ಯ ಮತ್ತು ಮೂಲಸೌಕರ್ಯ ಹೆಚ್ಚಾಗುತ್ತದೆ. ಹೊಸ ಟರ್ಮಿನಲ್ ಕಟ್ಟಡವು 4 ಹೊಸ ಏರೋಬ್ರಿಡ್ಜ್, ಒಂದು ಸಿಐಪಿ ಲಾಂಜ್ (commerciallyimportantperson), ಒಂದು ಎಕ್ಸಿಕ್ಯೂಟಿವ್ ಲಾಂಜ್, 8 ಎಸ್ಕಲೇಟರ್‌ಗಳು (ಅವುಗಳಲ್ಲಿ ನಾಲ್ಕು ಭದ್ರತಾ ಹಿಡುವಳಿ ಪ್ರದೇಶಗಳು) ಮತ್ತು ಎರಡು ವಿಐಪಿ ಲಾಂಜ್‌ಗಳನ್ನು ಹೊಸ ಟರ್ಮಿನಲ್ ಹೊಂದಲಿದೆ. ಸದ್ಯ ವಿಮಾನ ನಿಲ್ದಾಣದ ಟರ್ಮಿನಲ್ 3600 ಚದರ ಮೀಟರ್‌ಆಗಿದ್ದು, 500 ಪ್ರಯಾಣಿಕರ ಸಾಮರ್ಥ್ಯ ಹೊಂದಿದೆ. ಹೊಸ ಟರ್ಮಿನಲ್ 19,400 ಚದರ ಮೀಟರ್‌ವಿಸ್ತೀರ್ಣದಲ್ಲಿ ನಿರ್ಮಾಣ ವಾಗುತ್ತಿದ್ದು, ಏಕಕಾಲದಲ್ಲಿ 2400 ಪ್ರಯಾಣಿಕರ ಆಗಮನ ಮತ್ತು ನಿರ್ಗಮನ ನಿರ್ವಹಿಸುವ ಸಾಮರ್ಥ್ಯ ಹೊಂದಲಿದೆ.

ಪ್ರಸ್ತುತ 3 ಏರ್‌ಬಸ್ ವಿಮಾನ ಮತ್ತು 4 ಎಟಿಆರ್ ವಿಮಾನ ಒಂದೇ ಸಮಯದಲ್ಲಿ ಲ್ಯಾಂಡಿಗ್ ಆಗಬಹುದು. ಹೊಸ ಟರ್ಮಿನಲ್‌ನಲ್ಲಿ ಏಕಕಾಲಕ್ಕೆ 10 ಏರ್‌ಬಸ್ ಮತ್ತು 4 ಎಟಿಆರ್‌ಸೇರಿ 14 ವಿಮಾನಗಳ ಸಾಮರ್ಥ್ಯದ ನಿರ್ಮಾಣ ಹಂತದಲ್ಲಿದೆ.

ಬೆಂಗಳೂರು ಮತ್ತು ಮಂಗಳೂರು ನಂತರ ಹೊಸ ಟರ್ಮಿನಲ್‌ನಲ್ಲಿ ಎಕ್ಸಿಕ್ಯೂಟಿವ್ ಲಾಂಜ್ ಹುಬ್ಬಳ್ಳಿಯಲ್ಲಿ ನಿರ್ಮಿಸಲಾಗುತ್ತಿದೆ. ಹೊಸ ಟರ್ಮಿನಲ್‌ನಲ್ಲಿ ಪ್ರಯಾಣಿಕರು ಏರೋ ಬ್ರಿಡ್ಜ್ ಎಸ್ಕ್‌ಲೇಟರ್, ಲಿಫ್ಟ್‌ನಂತಹ ಹೊಸ ಸೌಲಭ್ಯ ಪಡೆಯಲಿದ್ದಾರೆ. ಹೊಸ ಟರ್ಮಿನಲ್ ಕಟ್ಟಡದ ವಿಸ್ತರಣೆ ಜತೆಗೆ ವಾಹನಗಳ ಪಾರ್ಕಿಂಗ್ಗೂ ವ್ಯವಸ್ಥೆ ಮಾಡಲಾಗುತ್ತಿದೆ. 500 ಕಾರು, 10 ಬಸ್, 100 ಟ್ಯಾಕ್ಸಿ, ಬೈಕ್ ಹಾಗೂ ಸಿಬ್ಬಂದಿಗಳ ವಾಹನ ಪಾರ್ಕಿಂಗ್‌ಗೆ ಪ್ರತ್ಯೇಕ ವ್ಯವಸ್ಥೆ ಮಾಡಲು ಯೋಚಿಸಲಾಗಿದೆ. ಈ ನಿಲ್ದಾಣ ಪರಿಸರ ಸ್ನೇಹಿ ನಿಲ್ದಾಣವಾಗಿ ಹೊರಹೊಮ್ಮಲಿದೆ.

ಸದ್ಯ ಜೂನ್‌ವರೆಗೂ ಕಾಮಗಾರಿಯ ಅವಧಿಯನ್ನು ವಿಸ್ತರಿಸಲಾಗಿದೆ. ಜೂನ್‌ನೊಳಗೆ ಪೂರ್ಣಗೊಳಿಸಿ ವಿಮಾನಯಾನ ಪ್ರಾಧಿಕಾರಕ್ಕೆ ಹಸ್ತಾಂತರಿಸುವಂತೆ ಸೂಚಿಸಲಾಗಿದೆ. ಅಷ್ಟರೊಳಗೆ ಆಗುತ್ತದೆಯೋ ಅಥವಾ ಮತ್ತೆ ಅವಧಿ ವಿಸ್ತರಿಸಬೇ ಕಾಗುತ್ತದೆಯೋ ಕಾಯ್ದು ನೋಡಬೇಕಷ್ಟೇ. ಆದಷ್ಟು ಬೇಗನೆ ವಿಮಾನನಿಲ್ದಾಣಕಾಮಗಾರಿಪೂರ್ಣಗೊಳಿಸುವಂತೆ ಆಗ್ರಹ ಜನರದ್ದು.



ಹುಬ್ಬಳ್ಳಿ ವಿಮಾನ ನಿಲ್ದಾಣದಲ್ಲಿ ನಡೆಯುತ್ತಿರುವ ಕಾಮಗಾರಿಯ ಹೊರನೋಟ.

■ ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದಿಂದ ಈ ಕಾಮಗಾರಿ ನಡೆಯುತ್ತಿದೆ.

■ ಮಹಾರಾಷ್ಟ್ರದ ನಾಸಿಕ್ ಮೂಲದ ಹರ್ಷ ಕನ್‌ಸ್ಟ್ರಕ್ಷನ್ ಕಂಪನಿ ಕಾಮಗಾರಿಯ ಗುತ್ತಿಗೆ ಪಡೆದಿದೆ

■ ಲಾಜಿಸ್ಟಿಕ್ ಮತ್ತು ಕಾರ್ಯಗತಗೊಳಿಸುವ ಸವಾಲು ಸೇರಿ ಅನೇಕ ಅಂಶಗಳಿಂದಾಗಿ ಕೆಲಸ ಕೊಂಚ ವಿಳಂಬ

■ ಸದ್ಯ ಶೇ.70ರಷ್ಟು ಕಾಮಗಾರಿ ಮುಗಿಗಿದ್ದು, ಉಳಿದ ಕಾಮಗಾರಿ ಜೂನ್ ಅಂತ್ಯದೊಳಗೆ ಮುಗಿಯುವ ಯಾವ ಲಕ್ಷಣಗಳು ಗೋಚರಿಸುತ್ತಿಲ್ಲ.

■ ಹೊಸ ಟರ್ಮಿನಲ್‌ನಲ್ಲಿ ಏಕಕಾಲಕ್ಕೆ 10 ಏರ್‌ಬಸ್ ಮತ್ತು 4 ಎಟಿಆರ್‌ಸೇರಿ 14 ವಿಮಾನಗಳ ಸಾಮರ್ಥ್ಯದ ನಿರ್ಮಾಣ ಹಂತದಲ್ಲಿದೆ.

ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಾಮಗಾರಿ ಶೇ. 80ರಷ್ಟಾಗಿದೆ. ಜನವರಿಗೆ ಮುಗಿಯಬೇಕಿದ್ದ ಕಾಮಗಾರಿ ಕಾರಣಾಂತರಗಳಿಂದ ಜೂನ್ ಅಂತ್ಯದ ವರೆಗೂ ವಿಸ್ತರಿಸಲಾಗಿದೆ. ಅಷ್ಟರೊಳಗೆ ಪೂರ್ಣವಾಗುವ ಸಾಧ್ಯತೆ ಇದೆ.

• **ರೂಪೇಶಕುಮಾರ** ನಿರ್ದೇಶಕರು, ವಿಮಾನ ನಿಲ್ದಾಣ, ಹುಬ್ಬಳ್ಳಿ

ಚಂದ್ರಮೌಳೇಶ್ವರ ದೇವಸ್ಥಾನದ ಹೊರನೋಟ

ವಿಮಾನ ನಿಲ್ದಾಣದ ಹೊರನೋಟವು ಐತಿಹಾಸಿ ಕತೆ ಪ್ರತಿಬಿಂಬಿಸಲಿದೆ. ಹುಬ್ಬಳ್ಳಿಯಲ್ಲಿನ ಇತಿಹಾ ಸ ಪ್ರಸಿದ್ಧ ಚಂದ್ರಮೌಳೇಶ್ವರ ದೇವಸ್ಥಾನದಿಂದ ಸ್ಫೂರ್ತಿ ಪಡೆದು ಹೊರನೋಟ ನಿರ್ಮಿಸಲಾಗುತ್ತಿದೆ.

ವಸತಿ ರಹಿತರಿಗೆ ನಿವೇಶನ ನೀಡಿ

ಹುಡಾ ಕಚೇರಿ ಎದುರು ನಿವೇಶನ ರಹಿತರ ಆಂದೋಲನ ಸಂಘಟನೆಯಿಂದ ಪ್ರತಿಭಟನೆ



ವಸತಿ ರಹಿತರಿಗೆ ನಿವೇಶನ ಒದಗಿಸಲು ಒತ್ತಾಯಿಸಿ ನಿವೇಶನ ರಹಿತರ ಆಂದೋಲನ ಸಂಘಟನೆಯಿಂದ ಮಂಗಳವಾರ ಹುಡಾ ಕಚೇರಿ ಎದುರು ಪ್ರತಿಭಟನೆ ನಡೆಸಿ ಹುಡಾ ಅಧ್ಯಕ್ಷರಿಗೆ ಮನವಿ ಸಲ್ಲಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಹು-ಧಾ ನಗರಾಭಿವೃದ್ಧಿ ಪ್ರಾಧಿಕಾರ (ಹುಡಾ) ಹಿಂದುಳಿದವರಿಗೆ ಸೂರು ಕಲ್ಪಿಸುವ ತನ್ನ ಮೂಲ ಉದ್ದೇಶ ಕೈಬಿಟ್ಟು ಬೇರೆಲ್ಲ ಕೆಲಸ ಮಾಡುತ್ತಿದೆ ಎಂದು ಆರೋಪಿಸಿದ ನಿವೇಶನ ರಹಿತರ ಆಂದೋಲನ ಸಂಘಟನೆ, ವಸತಿ ರಹಿತರಿಗೆ ನಿವೇಶನ ಒದಗಿಸಬೇಕೆಂದು ಮಂಗಳವಾರ ಹುಡಾ ಕಚೇರಿ ಎದುರು ಪ್ರತಿಭಟನೆ ನಡೆಸಿತು.

ಕಳೆದ ನಾಲ್ಕು ದಶಕದಿಂದ ಮಹಾನಗರದಲ್ಲಿ ಮನೆ, ಖಾಲಿ ಜಾಗ ಇಲ್ಲದೇ ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದೇವೆ. ಆರ್ಥಿಕವಾಗಿ ಹಿಂದುಳಿದ ಕುಟುಂಬಗಳಿಗೆ ನಿವೇಶನ ಒದಗಿಸುವ ನಗರಾಭಿವೃದ್ಧಿ ಪ್ರಾಧಿಕಾರವು ಇದೀಗ ಜನರ ಹಿತ ಮರೆತಿದೆ. ಸತತ ಹೋರಾಟ ನಡೆಸುತ್ತ ಬಂದಿದ್ದರೂ ಅವಳಿನಗರದ ಸರ್ಕಾರಿ ಜಾಗ ಗುರುತಿಸಿ ಬಡವರಿಗೆ ನಿವೇಶನ ನೀಡುತ್ತಿಲ್ಲವೆಂದು ಪ್ರತಿಭಟನೆ ನೇತೃತ್ವ ವಹಿಸಿದ್ದ ಆಂದೋಲನ ಸಂಚಾಲಕ ನಾಗರಾಜ ಗುರಿಕಾರ ಆರೋಪಿಸಿದರು.

ಬಡವರು, ಆರ್ಥಿಕ ಹಿಂದುಳಿದವರಿಗೆ ಮನೆ, ನಿವೇಶನ ಕೊಡಲು ಆಗದಿದ್ದರೆ ಪ್ರಾಧಿಕಾರ ಯಾತಕ್ಕಾಗಿ ಇದೆ? ಸರ್ಕಾರಿ ಕಚೇರಿಯ ಉದ್ದೇಶವಾದರೂ ಏನು? ಎಂದು ಪ್ರಶ್ನಿಸಿದರು. ಪ್ರಾಧಿಕಾರವು ಇತ್ತೀಚೆಗೆ ಅವಳಿನಗರ ಸುತ್ತಲಿನ 46 ಹಳ್ಳಿಗಳನ್ನು ಹುಡಾ ವ್ಯಾಪ್ತಿಗೆ ಸೇರಿಸಿಕೊಂಡಿದೆ. ಈ ಹಳ್ಳಿಗಳಲ್ಲಿ ಸರ್ಕಾರಿ ಭೂಮಿಗಳಿವೆ. ಅವುಗಳನ್ನು ಗುರುತಿಸಿ, ಆರ್ಥಿಕ ಹಿಂದುಳಿದವರಿಗಾಗಿ ಜಾಗ ಮೀಸಲಿಡ ಬೇಕು. ಅದರಲ್ಲಿ ಲೇಔಟ್ ನಿರ್ಮಿಸಿ ಹಂಚಿಕೆ ಮಾಡ ಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಹುಡಾ ಅಧ್ಯಕ್ಷ ಶಾಕೀರ ಸನದಿ ಬಡವರ ಬಗ್ಗೆ ಕಾಳಜಿ ಉಳ್ಳವರು. ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಹಿಂದುಳಿದವರಿಗಾಗಿ ವಸತಿ ಯೋಜನೆ ಜಾರಿ ಮಾಡುವುದಾಗಿ ಭರವಸೆ ನೀಡಿದ್ದರು. ಅದರಂತೆ ಈಗ ವಸತಿ ರಹಿತರು ಮನವಿ ಮಾಡುತ್ತಿದ್ದು, ಕೂಡಲೇ ಯೋಜನೆ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು.

ಪ್ರತಿಭಟನೆ ಬಳಿಕ ಶಾಕೀರ ಸನದಿ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಬಸವರಾಜ ಕಿತ್ತೂರ, ರಾಜು ಹಿರೇವಡಿಯರ, ನಾಗರಾಜ ನಾಡಕರ್ಣಿ, ಕಿರಣಸಿಂಗ್ ರಜಪೂತ, ಮಹಾದೇವಿ ಉಮಚಗಿ, ಬಿಬಿಜಾನ್ ಮುಲ್ಲಾ ಸೇರಿ ಹಲವರಿದ್ದರು.

ದೇವಿಯರ ಮೆರವಣಿಗೆಗೆ ಕುಂಭಮೇಳ ಮೆರುಗು

• **ಕನ್ನಡಪ್ರಭ ವಾರ್ತೆ** ಧಾರವಾಡ

ಇಲ್ಲಿಯ ಹಾವೇರಿಪೇಟೆಯ ದ್ಯಾಮವ್ವ-ದುರ್ಗವ್ವ ದೇವಿಯರ ಜಾತ್ರಾ ಮಹೋತ್ಸವ ಮಂಗಳವಾರ ಸಡಗರ-ಸಂಭ್ರಮದಿಂದ ಜರುಗಿತು. ಭಕ್ತಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಸಾವಿರಾರು ಭಕ್ತರು ಪಾಲ್ಗೊಂಡು ದೇವಿಯರ ಕೃಪೆಗೆ ಪಾತ್ರರಾದರು.


ಜಾತ್ರಾ ಮಹೋತ್ಸವದ ಅಂಗವಾಗಿ ಮಂಗಳವಾರ ಬೆಳಗ್ಗೆ ಉಭಯ ದೇವಿಯರ ಭವ್ಯ ಮೆರವಣಿಯಲ್ಲಿ ಮುತ್ತೈದೆಯರು ಪೂರ್ಣಕುಂಭ ಹೊತ್ತು ಸಾಗುತ್ತಿದ್ದರೆ, ಮೆರವಣಿಗೆಯುದ್ದಕ್ಕೂ ಮಂಗಳವಾದ್ಯ, ಕಹಳೆ ಹಾಗೂ ಜಯಘೋಷಗಳು ಮೊಳಗಿದವು. ಪುಷ್ಪಾಲಂಕೃತ ರಥದಲ್ಲಿ ವಿರಾಜಮಾನರಾಗಿದ್ದ ದ್ಯಾಮವ್ವ-ದುರ್ಗವ್ವ ದೇವಿಯರನ್ನು ಕಂಡ ಭಕ್ತರು ಭಕ್ತಿಪರವಶರಾಗಿ ಪೂಜೆ ಸಲ್ಲಿಸಿದರು. ಹಾವೇರಿಪೇಟೆ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿದ ಈ ಮೆರವಣಿಗೆ ಇಡೀ ಪರಿಸರದಲ್ಲಿ ಹಬ್ಬದ ವಾತಾವರಣ ನಿರ್ಮಿಸಿತ್ತು.

ಸಂಜೆ ದೇವಸ್ಥಾನದ ಆವರಣದಲ್ಲಿ ನಡೆದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾಸ್ಯ ಕಲಾವಿದ ಮಹಾದೇವ ಸತ್ತಿಗೇರಿ ''''ನಗೆ ಹಬ್ಬ'''' ಜನಮನ ಆಕರ್ಷಿಸಿದ್ದು, ಉತ್ತರ ಕರ್ನಾಟಕ ಶೈಲಿಯ ಭಾಷೆ ಮತ್ತು ಮ್ಯಾನರಿಸಂ ಮೂಲಕ ಸತ್ತಿಗೇರಿ ಪ್ರೇಕ್ಷಕರನ್ನು ನಗೆಗಡಲಲ್ಲಿ ತೇಲಿಸಿದರು. ಜಾತ್ರೆಯ ಅಂಗವಾಗಿ ದೇವಿಯರಿಗೆ ವಿಶೇಷ ಅಲಂಕಾರ, ಅಭಿಷೇಕ ಹಾಗೂ ಮಹಾಪೂಜೆ ನೆರವೇರಿಸಲಾಯಿತು. ಹಾವೇರಿಪೇಟೆ ಸೇರಿ ಧಾರವಾಡದ ವಿವಿಧ ಭಾಗಗಳಿಂದ ಭಕ್ತರು ಆಗಮಿಸಿ ದರ್ಶನ ಪಡೆದರು. ಬಂದೋಬಸ್ತ್‌ಗಾಗಿ ಪೊಲೀಸರನ್ನು ನಿಯೋಜಿಸಿತ್ತು. ಜಾತ್ರಾ ಸಮಿತಿ ಸದಸ್ಯರು ಕಾರ್ಯಕ್ರಮದ ಯಶಸ್ಸಿಗೆ ಶ್ರಮಿಸಿದರು.

ಕಂಠಿ ಓಣಿಯ ಮುತವಲಿ ಅರಕಿನ ಜಮಾತ್ ಯುವ ಸಮಿತಿ ಬಳಗದ ಇರ್ಫಾನ್ ಹಾವೇರಿ ಶರಬತ್ತು ಹಂಚಿದರು. ಮುಜ್ಜು ಶಿವಳ್ಳಿ, ನಿಯಾಜ್ ಹಾವೇರಿ, ರಾಕೇಶ್ ಸವಣೂರ, ಸದ್ದಾಂ ಬಂಕಾಪುರ ಹಾಗೂ ದ್ಯಾಮವ್ವ-ದುರಗವ್ವ ಜಾತ್ರೆಯ ಪಂಚ ಕಮಿಟಿ ಅಧ್ಯಕ್ಷರಾದ ಕೆ. ಎಸ್ ಭೀಮಣ್ಣವರ್, ವಿಜಯ ಬೋಸ್ಲೆ, ಗಂಗಣ್ಣ ಜಮದಾಳಿ, ರಾಮಕೃಷ್ಣ ಬೋಸ್ಲೆ ಮತ್ತಿತರರು ಇದ್ದರು.



ದೇವಿಯರ ಮೆರವಣಿಗೆಯಲ್ಲಿ ಪಾಲ್ಗೊಂಡಿರುವ ಹಿಂದೂ-ಮುಸ್ಲಿಂ ಬಾಂಧವರು.



ಹುಬ್ಬಳ್ಳಿಯ ಎಪಿಎಂಸಿ ಈಶ್ವರನಗರದ ಗಣೇಶ ಕಾಲನಿಯ ಗಣೇಶ ದೇವಸ್ಥಾನದಲ್ಲಿ ಮಂಗಳವಾರ ಅಂಗಾರಕ ಸಂಕಷ್ಟಿ ಪ್ರಯುಕ್ತ ವಿಶೇಷ ಪುಷ್ಪ ಅಲಂಕಾರ ಮಾಡಲಾಗಿತ್ತು. ಪೂಜಾ ಕಾರ್ಯಕ್ರಮದ ಬಳಿಕ ಸ್ಥಳೀಯ ಮುಖಂಡರು ಅನ್ನ ಪ್ರಸಾದ ವ್ಯವಸ್ಥೆ ಕಲ್ಪಿಸಿದ್ದರು. ನೂರಾರು ಭಕ್ತರು ಆಗಮಿಸಿ ಪ್ರಸಾದ ಸ್ವೀಕರಿಸಿದರು.

ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರಖಾನೆ ನಿಯಮಿತ, ಬೈಲಹೊಂಗಲ.
ಕಾರ್ಖಾನೆಯ ನಿವೇಶನ ಸಿದ್ಧಸಮುದ್ರ ಪೋಸ್ಟ: ಬೆಳವಡಿ 591 104 ತಾಲೂಕ: ಬೈಲಹೊಂಗಲ ಜಿಲ್ಲಾ: ಬೆಳಗಾವಿ E-mail: someshwarsugar@rediffmail.com

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಸರ್ಕಾರದ ರಾಜ್ಯ ಮಟ್ಟದ ಪರಿಸರ ಪರಿಣಾಮ ಮೌಲ್ಯಮಾಪನ ಪ್ರಾಧಿಕಾರವು (State Environment Impact Assessment Authority - SEIAA) ಪತ್ರ ಸಂಖ್ಯೆ EC No. EC 23 B2501 KA 5869006, ಕಡತ ಸಂಖ್ಯೆ. SEIAA 36 IND 2021 ದಿನಾಂಕ: 28ನೇ ಏಪ್ರೀಲ್ 2026 ರಂತೆ **ಶ್ರೀ ಸೋಮೇಶ್ವರ ಸಹಕಾರಿ ಸಕ್ಕರೆ ಕಾರ್ಖಾನೆ ನಿ., ಬೈಲಹೊಂಗಲ** ಕಾರ್ಖಾನೆ ನಿವೇಶನ ಸಿದ್ಧಸಮುದ್ರ ಪೋಸ್ಟ್: ಬೆಳವಡಿ ತಾಲೂಕು ಬೈಲಹೊಂಗಲ ಜಿಲ್ಲೆ ಬೆಳಗಾವಿ ಕರ್ನಾಟಕ ರಾಜ್ಯ ಪಿನ್ ಕೋಡ್ : 591 104 ವತಿಯಿಂದ ಮೋಲ್ಯಾಸಿಸ್ (ಬಿ & ಸಿ ಹೆವಿ)/ ಕೇನ್ ಸಿರಪ್ ಬೇಸ್ಡ್ 45 ಕೆ.ಎಲ್.ಪಿ.ಡಿ ಸಾಮರ್ಥ್ಯದ ಇಥೆನಾಲ್ ಘಟಕ ಸ್ಥಾಪನೆಗೆ **"ಪರಿಸರ ವಿಮೋಚನಾ"** ಪತ್ರವನ್ನು ನೀಡಿರುತ್ತದೆ ಎಂಬುದನ್ನು ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರಲಾಗಿದೆ. **ಪರಿಸರ ವಿಮೋಚನಾ** ಪತ್ರವು ಕರ್ನಾಟಕ ರಾಜ್ಯ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ (Karnataka State Pollution Control Board -KSPCB) ಯಲ್ಲಿ ಲಭ್ಯವಿರುತ್ತದೆ. ಕೇಂದ್ರ ಪರಿಸರ ಮಂತ್ರಾಲಯದ ವೆಬ್‌ಸೈಟ್ https://parivesh.nic.in/ನಲ್ಲೂ ಸಹ ನೋಡಬಹುದಾಗಿದೆ.

ಸಹಿ/- ಜಿ. ಎಮ್. ಪಾಟೀಲ
ವ್ಯವಸ್ಥಾಪಕ ನಿರ್ದೇಶಕರು

ಸಹಿ/- ಬಿ.ಆರ್. ಬಾಳೇಕುಂದರಗಿ
ಅಧ್ಯಕ್ಷರು.

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 16 ಏಪ್ರಿಲ್, 2026

S.O.1934(E).- ರೈಲ್ವೆ ಕಾಯ್ದೆ, 1989 (1989 ರ 24) (ಇನ್ನು ಮುಂದೆ ಸದರಿ ಕಾಯ್ದೆ ಎಂದು ಉಲ್ಲೇಖಿಸಲಾಗಿದೆ) ರ ಸೆಕ್ಷನ್ 20A ರ ಉಪ-ಸೆಕ್ಷನ್ (1) ರಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಕೇಂದ್ರ ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ, ಇಲ್ಲಿ ಲಗತ್ತಿಸಲಾದ ವೇಳಾಪಟ್ಟಿಯಲ್ಲಿ ನೀಡಲಾದ ಸಂಕ್ಷಿಪ್ತ ವಿವರಣೆಯನ್ನು ವಿಶೇಷ ರೈಲ್ವೆ ಯೋಜನೆಯ ಕಾರ್ಯಗತಗೊಳಿಸಲು ಅಗತ್ಯವಿದೆ ಎಂದು ತೃಪ್ತಿಪಡಿಸಿದ ನಂತರ, ಅಂದರೆ. ಕರ್ನಾಟಕ ರಾಜ್ಯದ "ರಾಣೆಬೆನ್ನೂರು ಅಂಗಳದಲ್ಲಿ (ರಾಣೆಬೆನ್ನೂರು ನಗರ) ಕಿ.ಮೀ: 362/100–200 ರಲ್ಲಿ LC ಸಂಖ್ಯೆ 218 ರ ಬದಲಿಗೆ ROB ನಿರ್ಮಾಣ", ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಈ ಮೂಲಕ ಘೋಷಿಸುತ್ತದೆ:

ಈ ಭೂಮಿಯಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯು, ಅಧಿಕೃತ ಗೆಜೆಟ್‌ನಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ, ಸದರಿ ಕಾಯಿದೆಯ ಸೆಕ್ಷನ್ 20D ಯ ಉಪ-ವಿಭಾಗ (1) ರ ಅಡಿಯಲ್ಲಿ ಮೇಲೆ ತಿಳಿಸಲಾದ ಉದ್ದೇಶಕ್ಕಾಗಿ ಅಂತಹ ಭೂಮಿಯ ಆಕ್ಷೇಪಣೆ ಮತ್ತು ಬಳಕೆಯನ್ನು ಮಾಡಬಹುದು:

ಅಂತಹ ಪ್ರತಿಯೊಂದು ಆಕ್ಷೇಪಣೆಯನ್ನು "ರಾಣೆಬೆನ್ನೂರು ಅಂಗಳದಲ್ಲಿ (ರಾಣೆಬೆನ್ನೂರು ನಗರ) ಕಿ.ಮೀ: 362/100–200 ರಲ್ಲಿ LC ಸಂಖ್ಯೆ 218 ರ ಬದಲಿಗೆ ROB ನಿರ್ಮಾಣ" ಕ್ಕಾಗಿ ಸಕ್ಷಮ ಪ್ರಾಧಿಕಾರಕ್ಕೆ, ಅಂದರೆ ಉಸ್ತುವಾರಿ ಭೂ ಸ್ವಾಧೀನ ಅಧಿಕಾರಿ ಹಾವೇರಿ ಸಹಾಯಕ ಆಯುಕ್ತ ಮತ್ತು ಪ್ರಾದೇಶಿಕ ಆಯುಕ್ತರಿಗೆ ಲಿಖಿತವಾಗಿ ಸಲ್ಲಿಸಬೇಕು ಮತ್ತು ಅದರ ಆಧಾರಗಳನ್ನು ನಿಗದಿಪಡಿಸಬೇಕು ಮತ್ತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆದಾರರಿಗೆ ವೈಯಕ್ತಿಕವಾಗಿ ಅಥವಾ ಕಾನೂನು ವೃತ್ತಿಪರರಿಂದ ಕೇಳಲು ಅವಕಾಶವನ್ನು ನೀಡಬೇಕು ಮತ್ತು ವಿಚಾರಣೆಯ ನಂತರ ನೀಡಬಹುದು. ಅಂತಹ ಎಲ್ಲಾ ಆಕ್ಷೇಪಣೆಗಳು ಮತ್ತು ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಭಾವಿಸಿದಂತೆ, ಹೆಚ್ಚಿನ ವಿಚಾರಣೆ ನಡೆಸಿದ ನಂತರ, ಆದೇಶದ ಮೂಲಕ, ಆಕ್ಷೇಪಣೆಗಳನ್ನು ಅನುಮತಿಸಬಹುದು ಅಥವಾ ನಿರಾಕರಿಸಬಹುದು:

ಸದರಿ ಕಾಯಿದೆಯ ಸೆಕ್ಷನ್ 20D ಯ ಉಪ-ವಿಭಾಗ (2) ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುದೇ ಆದೇಶವು ಅಂತಿಮವಾಗಿರುತ್ತದೆ:

ಈ ಅಧಿಸೂಚನೆಯ ಅಡಿಯಲ್ಲಿ ಬರುವ ಭೂಮಿಯ ಯೋಜನೆಗಳು ಮತ್ತು ಇತರ ವಿವರಗಳು ಲಭ್ಯವಿದೆ ಮತ್ತು ಆಸಕ್ತ ವ್ಯಕ್ತಿಯು ಮೇಲೆ ತಿಳಿಸಲಾದ ಸಕ್ಷಮ ಪ್ರಾಧಿಕಾರದ ಕಚೇರಿಯಲ್ಲಿ ಪರಿಶೀಲಿಸಬಹುದು.

ವೇಳಾಪಟ್ಟಿ

ಕ್ರ. ಸಂ.	ಗ್ರಾಮದ ಹೆಸರು	ಸರ್ವೆ ನಂ.	ಭಾಗ	ಹೆಕ್ಟೇರ್‌ನಲ್ಲಿ ವಿಸ್ತೀರ್ಣ
1	ರಾಣೆಬೆನ್ನೂರು ನಗರ	2	A/1B/1B	0.0181
2	ರಾಣೆಬೆನ್ನೂರು ನಗರ	2	A/1B/1A	0.0059
3	ರಾಣೆಬೆನ್ನೂರು ನಗರ	2	A1/B2	0.0181
4	ರಾಣೆಬೆನ್ನೂರು ನಗರ	1	-	0.0056
5	ರಾಣೆಬೆನ್ನೂರು ನಗರ	2	A-1-A/1	0.3997
6	ರಾಣೆಬೆನ್ನೂರು ನಗರ	2	A-1-A/2	0.0145
7	ರಾಣೆಬೆನ್ನೂರು ನಗರ	2	A2	0.2098
8	ರಾಣೆಬೆನ್ನೂರು ನಗರ	2	B	0.0090
9	ರಾಣೆಬೆನ್ನೂರು ನಗರ	3	-	0.0037
10	ರಾಣೆಬೆನ್ನೂರು ನಗರ	4	A/1-A-1/A	0.0355
11	ರಾಣೆಬೆನ್ನೂರು ನಗರ	4	A/1-A-1/B	0.0279
12	ರಾಣೆಬೆನ್ನೂರು ನಗರ	4	A/1-A-1/K/1	0.0044
13	ರಾಣೆಬೆನ್ನೂರು ನಗರ	4	A/1-A-1/K/2	0.0040
14	ರಾಣೆಬೆನ್ನೂರು ನಗರ	4	A/1-A-1/K/3	0.0056
15	ರಾಣೆಬೆನ್ನೂರು ನಗರ	4	A/1-A-1/K/4	0.0014
16	ರಾಣೆಬೆನ್ನೂರು ನಗರ	4	A/1-A-1/U	0.0002
17	ರಾಣೆಬೆನ್ನೂರು ನಗರ	4	A/1-A-1/V/1	0.0053
18	ರಾಣೆಬೆನ್ನೂರು ನಗರ	4	A/1-A-1/V/2	0.0048
19	ರಾಣೆಬೆನ್ನೂರು ನಗರ	4	A/1-A-1/V/3	0.0037
20	ರಾಣೆಬೆನ್ನೂರು ನಗರ	4	A/1-A-3A	0.0174
21	ರಾಣೆಬೆನ್ನೂರು ನಗರ	4	E-1	0.0077
22	ರಾಣೆಬೆನ್ನೂರು ನಗರ	4	E-2	0.0094
23	ರಾಣೆಬೆನ್ನೂರು ನಗರ	4	A/1-A-1/J-2	0.0006
24	ರಾಣೆಬೆನ್ನೂರು ನಗರ	9	-	0.0160
25	ರಾಣೆಬೆನ್ನೂರು ನಗರ	10	-	0.0035
26	ರಾಣೆಬೆನ್ನೂರು ನಗರ	11	-	0.0052
27	ರಾಣೆಬೆನ್ನೂರು ನಗರ	12	B-4A/1	0.0006
28	ರಾಣೆಬೆನ್ನೂರು ನಗರ	12	B-4A/3	0.0005
29	ರಾಣೆಬೆನ್ನೂರು ನಗರ	12	B-4B	0.0021
30	ರಾಣೆಬೆನ್ನೂರು ನಗರ	30	A	0.0043
31	ರಾಣೆಬೆನ್ನೂರು ನಗರ	18	B-1	0.0035
32	ರಾಣೆಬೆನ್ನೂರು ನಗರ	18	B-2	
33	ರಾಣೆಬೆನ್ನೂರು ನಗರ	30	B	0.0021
34	ರಾಣೆಬೆನ್ನೂರು ನಗರ	18	A/1	0.0020
35	ರಾಣೆಬೆನ್ನೂರು ನಗರ	18	A/2	0.0015
36	ರಾಣೆಬೆನ್ನೂರು ನಗರ	30	C	0.0032
37	ರಾಣೆಬೆನ್ನೂರು ನಗರ	30	E/1	0.0015
38	ರಾಣೆಬೆನ್ನೂರು ನಗರ	21	-	0.0003
39	ರಾಣೆಬೆನ್ನೂರು ನಗರ	30	D	0.0018
40	ರಾಣೆಬೆನ್ನೂರು ನಗರ	30	E/2	0.0041
41	ರಾಣೆಬೆನ್ನೂರು ನಗರ	22	-	0.0033
42	ರಾಣೆಬೆನ್ನೂರು ನಗರ	22	A	0.0015
43	ರಾಣೆಬೆನ್ನೂರು ನಗರ	24	A	0.0013
44	ರಾಣೆಬೆನ್ನೂರು ನಗರ	24	B	0.0017
45	ರಾಣೆಬೆನ್ನೂರು ನಗರ	26	-	0.0011
46	ರಾಣೆಬೆನ್ನೂರು ನಗರ	30	E-3-A	0.0234
47	ರಾಣೆಬೆನ್ನೂರು ನಗರ	30	E-3-B/1	0.0062
48	ರಾಣೆಬೆನ್ನೂರು ನಗರ	30	E-3-B/2	0.0038
49	ರಾಣೆಬೆನ್ನೂರು ನಗರ	30	E-3-C	0.0010
50	ರಾಣೆಬೆನ್ನೂರು ನಗರ	27	-	0.0023
51	ರಾಣೆಬೆನ್ನೂರು ನಗರ	28	-	0.0018
52	ರಾಣೆಬೆನ್ನೂರು ನಗರ	29	A	0.0026
53	ರಾಣೆಬೆನ್ನೂರು ನಗರ	29	B/1	
54	ರಾಣೆಬೆನ್ನೂರು ನಗರ	29	B/2	
55	ರಾಣೆಬೆನ್ನೂರು ನಗರ	29	B/3	
56	ರಾಣೆಬೆನ್ನೂರು ನಗರ	29	B/4	
57	ರಾಣೆಬೆನ್ನೂರು ನಗರ	31	-	0.0075
58	ರಾಣೆಬೆನ್ನೂರು ನಗರ	178	A1	0.0320
59	ರಾಣೆಬೆನ್ನೂರು ನಗರ	178	A2	0.0202
60	ರಾಣೆಬೆನ್ನೂರು ನಗರ	178	A-3-A/1	0.0038
61	ರಾಣೆಬೆನ್ನೂರು ನಗರ	178	A-3-A/2	0.0038
62	ರಾಣೆಬೆನ್ನೂರು ನಗರ	178	A-3-A/3	0.0095
63	ರಾಣೆಬೆನ್ನೂರು ನಗರ	178	A-3-B/1	0.0142
64	ರಾಣೆಬೆನ್ನೂರು ನಗರ	178	A-3-B/2	0.0029
65	ರಾಣೆಬೆನ್ನೂರು ನಗರ	178	A-4-A	0.0177
66	ರಾಣೆಬೆನ್ನೂರು ನಗರ	178	A-4-B	0.0036
67	ರಾಣೆಬೆನ್ನೂರು ನಗರ	178	A-4-C	0.0028
68	ರಾಣೆಬೆನ್ನೂರು ನಗರ	178	A-5	0.0085
69	ರಾಣೆಬೆನ್ನೂರು ನಗರ	178	B1/A	0.0083
70	ರಾಣೆಬೆನ್ನೂರು ನಗರ	178	B1/B	0.0016
71	ರಾಣೆಬೆನ್ನೂರು ನಗರ	178	B-2	0.0040
72	ರಾಣೆಬೆನ್ನೂರು ನಗರ	178	B-3	0.0040
73	ರಾಣೆಬೆನ್ನೂರು ನಗರ	178	B-4	0.0024
74	ರಾಣೆಬೆನ್ನೂರು ನಗರ	179	-	0.0040
75	ರಾಣೆಬೆನ್ನೂರು ನಗರ	180	A	0.0055
76	ರಾಣೆಬೆನ್ನೂರು ನಗರ	180	B	0.0042
77	ರಾಣೆಬೆನ್ನೂರು ನಗರ	186	-	0.0022
78	ರಾಣೆಬೆನ್ನೂರು ನಗರ	177	A	0.0105
79	ರಾಣೆಬೆನ್ನೂರು ನಗರ	177	B	0.0011
80	ರಾಣೆಬೆನ್ನೂರು ನಗರ	187	-	0.0021
81	ರಾಣೆಬೆನ್ನೂರು ನಗರ	176	-	0.0567
82	ರಾಣೆಬೆನ್ನೂರು ನಗರ	188	A	0.0032
83	ರಾಣೆಬೆನ್ನೂರು ನಗರ	188	B	0.0007
84	ರಾಣೆಬೆನ್ನೂರು ನಗರ	168	-	0.0052
85	ರಾಣೆಬೆನ್ನೂರು ನಗರ	169	-	0.0043
86	ರಾಣೆಬೆನ್ನೂರು ನಗರ	171	-	0.0015
87	ರಾಣೆಬೆನ್ನೂರು ನಗರ	568	Plot No.23	0.0039
88	ರಾಣೆಬೆನ್ನೂರು ನಗರ	568	Plot No.22	0.0056
89	ರಾಣೆಬೆನ್ನೂರು ನಗರ	568	Plot No.21	0.0112
90	ರಾಣೆಬೆನ್ನೂರು ನಗರ	568	Plot No.20	0.0155
91	ರಾಣೆಬೆನ್ನೂರು ನಗರ	568	Plot No.19	0.0135
92	ರಾಣೆಬೆನ್ನೂರು ನಗರ	568	Plot No.18	0.0005
93	ರಾಣೆಬೆನ್ನೂರು ನಗರ	568	Plot No.17	0.0125
94	ರಾಣೆಬೆನ್ನೂರು ನಗರ	568	Plot No.15	0.0052
95	ರಾಣೆಬೆನ್ನೂರು ನಗರ	568	Plot No.13	0.000025
96	ರಾಣೆಬೆನ್ನೂರು ನಗರ	567	Plot No. 38	0.0018
97	ರಾಣೆಬೆನ್ನೂರು ನಗರ	567	Plot No. 40	0.0217
	ಒಟ್ಟು			1.2540

ನಂ.ಡಬ್ಲ್ಯೂ.271/ಸಿಎನ್/ಬಿಎನ್‌ಸಿ/2026–27/ಲ್ಯಾಂಡ್ ಎಸ್‌ಆರ್‌ಪಿ/1727

ವಿವರಗಳಿಗೆ **https://egazette.gov.in** ಗೆ ಲಾಗ್ ಆನ್ ಮಾಡಿ.

ಸಹಿ/–
ಪ್ರದೀಪ್ ಪುರಿ,
ಮುಖ್ಯ ಎಂಜಿನಿಯರ್–III, ನಿರ್ಮಾಣ, ಬೆಂಗಳೂರು ಕಂಟೋನ್ಮೆಂಟ್

ಪಿಯುಬಿ/95/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR | SWRRLY | @SWRAILWAYHQ | @sw_railways


ರಾಜ್ಯದಲ್ಲಿ ತಾಪಮಾನ ಡಿಗ್ರಿ ಸೆಲ್ಸಿಯಸ್‌ಗಳಲ್ಲಿ

	ಬೀದರ್	ಕಲಬುರಗಿ	ರಾಯಚೂರು	ವಿಜಯಪುರ	ಗದಗ
ಗರಿಷ್ಠ	43.0	41.1	40.0	39.5	38.0
ಕನಿಷ್ಠ	21.6	27.0	25.4	22.6	21.8

ಕನ್ನಡಪ್ರಭ
ಬುಧವಾರ 6.05.2026

ಆಳ್ವಾಸ್‌ನಲ್ಲಿ ಈ ವರ್ಷದಿಂದಲೇ ಎಂಬಿಬಿಎಸ್: ಡಾ.ಮೋಹನ ಆಳ್ವ


ಮೂಡುಬಿದಿರೆ: ಮುಂದಿನ ಶೈಕ್ಷಣಿಕ ವಿಸ್ತರಣೆಯ ಭಾಗವಾಗಿ ಮೂಡುಬಿದಿರೆ ಆಳ್ವಾಸ್ ಶಿಕ್ಷಣ ಪ್ರತಿಷ್ಠಾನವು ಈ ಶೈಕ್ಷಣಿಕ ವರ್ಷದಿಂದಲೇ ವೈದ್ಯಕೀಯ ಶಿಕ್ಷಣ (ಎಂಬಿಬಿಎಸ್) ಕೋರ್ಸ್ ಪ್ರಾರಂಭಿಸಲಿದೆ ಎಂದು ಸಂಸ್ಥೆಯ ಅಧ್ಯಕ್ಷ ಡಾ. ಎಂ.ಮೋಹನ ಆಳ್ವ ತಿಳಿಸಿದರು. ಮಂಗಳವಾರ ಸುದ್ದಿಗಾರರ ಜೊತೆ ಮಾತನಾಡಿ, ಸಂಸ್ಥೆಯ ಶೈಕ್ಷಣಿಕ ಬೆಳವಣಿಗೆ ಕುರಿತು ಸಂಪೂರ್ಣ ಮಾಹಿತಿ ಹಂಚಿಕೊಂಡರು. ವೈದ್ಯಕೀಯ ಕ್ಷೇತ್ರದ ಮಹತ್ವವನ್ನು ತಮ್ಮ ಸ್ವಂತ ಅನುಭವದ ಮೂಲಕ ಆಳ್ವ ಅವರು ವಿವರಿಸಿದರು. ವೈದ್ಯಕೀಯ ಕ್ಷೇತ್ರದಲ್ಲಿ ಮಾನವೀಯ ಸ್ಪರ್ಶ ಅತ್ಯಂತ ಮುಖ್ಯ ಎಂದು ಅಭಿಪ್ರಾಯಪಟ್ಟ ಡಾ. ಮೋಹನ ಆಳ್ವ ಅವರು, ಹೊಸ ಕೋರ್ಸ್‌ನ ಆರಂಭದ ಬಗ್ಗೆ ಅಧಿಕೃತವಾಗಿ ಘೋಷಣೆ ಮಾಡಿದರು.



ವಿಡಿಯೋ ಕಾಲ್‌ನಲ್ಲಿ ಮಗುವನ್ನು ತೋರಿಸದ್ದಕ್ಕೆ ಅತ್ತೆಗೆ ಚಾಕು ಹಾಕಿದ!

